ಶ್ರೀ ಪ್ರಹ್ಲಾದರಾಜ ವಿರಚಿತ

ಶ್ರೀ ನರಸಿಂಹ ಸ್ತೋತ್ರ

(ಕನ್ನಡ ಅನುವಾದ ಸಹಿತ)

ಅನುವಾದಕರು : ಶ್ರೀ ಕೆ.ಎಲ್. ಪುಷ್ಕರಾಚಾರ್ಯ

ಪ್ರಹ್ಲಾದ ಕೃತ ನೃಸಿಂಹ ಸ್ತೋತ್ರಂ

ಶ್ರೀ ಪ್ರಹ್ಲಾದ ಉವಾಚ :

ಬ್ರಹ್ಮಾದಯಃ ಸುರಗಣಾ ಮುನಯೋಥಸಿದ್ಧಾಃ
ಸತ್ವೈಕಥಾನಮತಯೋ ವಚಸಾಂ ಪ್ರವಾಹೈಃ ॥
ನಾತಂ ಪರಸ್ಯ ಪರತೋಪ್ಯಧುನಾಪಿ ಯಾಂತಿ
ಕಿಂತೋಷ್ಟುಮರ್ಹತಿ ಸ ಮೇ ಹರಿರುಗ್ರಜಾತೇಃ ॥ ೧ ॥

ಸತ್ವಗುಣವೇ ಪ್ರಾಚುರ್ಯವಾಗುಳ್ಳ ಬ್ರಹ್ಮಾದಿ ಸರ್ವದೇವ ಸಮೂಹ ನಂತರ ಋಷಿ-ಮುನಿ-ಯೋಗಸಿದ್ಧ ಪುರುಷರು ಇವರೆಲ್ಲಾ ಸರ್ವದಾ ಶ್ರೀ ಹರಿಯಲ್ಲೇ ಮನಸ್ಸಿಟ್ಟವರು. ಭಗವದ್ಧ್ಯಾನಶಕ್ತಿಯಲ್ಲೇ ಹಿಗ್ಗಿ ಅರಳುವ ಬುದ್ಧಿಕುಶಲರು. ಅಥಏವ ಅನ್ಯತ್ರ ಬುದ್ಧಿಯನ್ನು ಹರಿಸದವರು. ಇಂತಹ ಸತ್ವಪಕ್ವಶಾಲಿಗಳ ವಾಕ್ ಪ್ರವಾಹದಿಂದಲೂ ಶ್ರೀ ಹರಿಯ ವಿಚಾರಕ್ಕೆ ಎಂದಿಗೂ ಆದ್ಯಂತವಿಲ್ಲ. ಅವನು ಲೋಕವಿಲಕ್ಷಣನು. ದೇಶಕಾಲಗಳಿಂದ ಪೂರ್ಣಳಾದ ಶ್ರೀರಮೆಗಿಂತ ಗುಣಪೂರ್ಣನು. ನಾನಾದರೋ ತಮೋಗುಣವೇ ಪ್ರಾಚುರ್ಯವಾದ ದೈತ್ಯಜಾತಿಯಲ್ಲಿ ಹುಟ್ಟಿದವ. ಹೀಗಿರುವ ನನ್ನ ಮಾತಿಗೆ ಈ ನರಸಿಂಹನು ತುಷ್ಟನಾಗುವನೇ? ಹಾಗಾದರೆ ಪ್ರಹ್ಲಾದನ ಸ್ತುತಿಗೆ ಪ್ರಸನ್ನನಾದನೆಂಬುದು ಕೇವಲ ಭಗವಂತನ ಭಕ್ತವಾತ್ಸಲ್ಯತೆಯೇ ಕಾರಣ.

ಮನ್ಯೇ ಧನಾಭಿಜನ ರೂಪ ತಪಃ ಶ್ರುತೌಜಃ
ತೇಜಃ ಪ್ರಭಾವ ಬಲಪೌರುಷ ಬುದ್ಧಿಯೋಗಾಃ ॥
ನಾರಾಧನಾಯ ಹಿ ಭವಂತಿ ಪರಸ್ಯ ಪುಂಸೋ
ಭಕ್ತ್ಯಾ ತುತೋಷ ಭಗವಾನ್ ನನುಯೂಥಪಾಯ। ॥ ೨ ॥

ಐಹಿಕ ಸಂಪತ್ತು, ಶ್ರೇಷ್ಠ ಕುಲ-ಪ್ರಸಿದ್ಧ ಮನೆತನ, ಶಾರೀರಕ ರೂಪ-ಲಾವಣ್ಯ, ತಪಸ್ಸು, ಓಜಸ್ಸು, ತೇಜಸ್ಸು, ನಾನಾವಿಧಪ್ರಭಾವ, ಬಲ-ಸಾಮರ್ಥ್ಯ, ಬೌದ್ಧಿಕ ಚತುರತ್ವ ಇವೆಲ್ಲವು ಕ್ಷರಾಕ್ಷರತೀತನಾದ ಪುರುಷೋತ್ತಮನನ್ನು ಒಲಿಸಲು ಅಶಕ್ತವುಗಳು.

Rarest Archives

ಇವುಗಳಿಲ್ಲದ ಗಜೇಂದ್ರನು ಮಾಡಿದ ಕೇವಲ ಭಕ್ತಿಗಾಗಿಯೇ ಶ್ರೀಹರಿ ಅವನಿಗೆ ಒಲಿದನಷ್ಟೆ? ಆದ್ದರಿಂದ ಕೇವಲ ಗುಣಗಳು ಶ್ರೀಹರಿಯನ್ನು ಒಲಿಸಲಾರವು. ಉತ್ತಮ ಗುಣವಂತರಾದ ಬ್ರಹ್ಮಾದಿ ದೇವತೆಗಳಿಗೂ ಭಗವಂತ ಅನುಗ್ರಹಿಸುವುದು ಅವರು ಮಾಡುವ ನಿರ್ವ್ಯಾಜ ಭಕ್ತಿಗೆ ಮಾತ್ರವೆಂಬ ಭಾವ.

ವಿಪ್ರಾದ್ದ್ವಿಷಡ್ಗುಣಯುತಾದ್ದರವಿಂದನಾಭ
ಪಾದಾರವಿಂದ ವಿಮುಖಾತ್ಶ್ವಪಚಂ ವರಿಷ್ಠಮ್ ॥
ಮನ್ಯೇ ತದರ್ಪಿತಮನೋ ವಚತಾನ್ಮಗೇಹ
ಪ್ರಾಣಃ ಪುನಾತಿ ಸಕಲಂ ನತು ಭೂರಿಮಾನಃ ॥ ೩ ॥

ಉತ್ತಮ ದ್ವಾದಶ ಲಕ್ಷಣ ಗುಣವಂತನಾದರೂ ಪದ್ಮನಾಭನ ಪಾದಾರವಿಂದದಲ್ಲಿ ಆಸಕ್ತನಾಗದ ಬ್ರಾಹ್ಮಣನಿಗಿಂತ ಹರಿಭಕ್ತನಾದ ಚಂಡಾಲನೇ ಶ್ರೇಷ್ಠ. ಆ ಭಗವಂತನಿಗೆ ತ್ರಿಕರಣಯುಕ್ತ ತನ್ನನ್ನೇ ಅರ್ಪಿಸಿಕೊಂಡ ಸಾಧಕನು ಎಲ್ಲವನ್ನೂ ಪವಿತ್ರಗೊಳಿಸುತ್ತಾನೆ. ಅಹಂಭಾವದಿಂದ ಮಾಡುವ ದುರಹಂಕಾರಿಯು ಯಾವುದನ್ನೂ ಪಾವನಗೊಳಿಸಲಾರನು. ಶುಭಫಲ ಪ್ರಾಪ್ತಿಗಾಗಿ ಮಾಡಿದ ನಮ್ಮ ಕರ್ಮಾನುಷ್ಠಾನವು ಮತ್ತೊಬ್ಬರ ಅವಹೇಳನಕ್ಕೆ ನಾಂದಿಯಾಗಬಾರದು. ಅಥವಾ ಅಪವಿತ್ರಗೊಳ್ಳುವುದೆಂಬ ಭಾವ.

ನೈವಾತ್ಮನಃ ಪ್ರಭುರಯಂ ನಿಜಲಾಭಪೂರ್ಣೋ
ಮಾನಂ ಜನಾದವಿದುಷಃ ಕರಣೋವೃಣೀತೇ ॥
ಯದ್ಯಜ್ಜನೋ ಭಗವತೇ ವಿದಧೀತಮಾನಮ್
ತಚ್ಚಾತ್ಮನೇ ಪ್ರತಿಮುಖಸ್ಯ ಯಥಾಮುಖಶ್ರೀಃ ॥ ೪ ॥

ವಿಭುವಾದ ಭಗವಂತ ಯಾರಿಗೆ–ಎಲ್ಲಿ–ಯಾವ–ಕಾಲದಲ್ಲಾದರೂ ಏನು ಬೇಕೆಂದರೂ ಪೂರೈಸುವ ಪ್ರಭು. ಜಗತ್ತಿನಲ್ಲಿ ನಡೆಯುವ ಪೂಜೆ–ಪುನಸ್ಕಾರ–ಮರ್ಯಾದೆಗಳ ಸೇವೆಯಿಂದ ಅವನಿಗೆ ಯಾವಪ್ರಯೋಜನವೂ ಇಲ್ಲ. ಕಾರಣ ಪೂರ್ಣಕಾಮನಾದ ನಿತ್ಯಾನಂದ ಪರಿಪೂರ್ಣಸ್ವರೂಪಿ. ಆದರೂ ಕೇವಲ ಭಕ್ತರಮೇಲಿನ ಕರುಣೆಯಿಂದ ನಮ್ಮಿಂದ ಮಾಡುವ ಅಲ್ಪ ಸೇವೆಯನ್ನೂ ಸ್ವೀಕರಿಸಿ ಅದರ ಫಲವನ್ನು ಭಕ್ತರು ಭೋಗಿಸುವಂತೆ ಮಾಡುವ ಮಹಾಮಹಿಮ. ಬಿಂಬ–ಪ್ರತಿಬಿಂಬ ಭಾವದಂತೆ ಕನ್ನಡಿಯ ಮುಂದಿರುವ ಮುಖಕ್ಕೆ ಮಾಡಿದ ಶೃಂಗಾರ ಕನ್ನಡಿಯ ಪ್ರತಿಮುಖಕ್ಕೆ ಶೋಭೆ ತರುವಂತೆ

Rarest Archiver

ಬಿಂಬನಿಗೆ ಅರ್ಪಿಸಿದ ಕಾರ್ಯಗಳು ಪ್ರತಿಬಿಂಬಕ್ಕೆ ಫಲಿತವಾಗುತ್ತದೆ. ಆದ್ದರಿಂದ ದೇವರಿಗೆ ಅರ್ಪಿಸದ ಯಾವಕಾರ್ಯಗಳ ಫಲವನ್ನೂ ಜೀವನು ಹೊಂದಲಾರ ಮತ್ತು ಭೋಗಿಸಲಾರನೆಂಬುದೇ ತತ್ವ.

ತಸ್ಮಾದಹಂ ವಿಗತ ವಿಕ್ಲವ ಈಶ್ವರಸ್ಯ
ಸರ್ವಾತ್ಮನಾ ಮಹಿ ಗೃಣಾಮಿ ಯಥಾ ಮನೀಷಮ್ ॥
ನೀಚೋಽಜಯಾಗುಣವಿಸರ್ಗ ಮನುಪ್ರವಿಷ್ಟಃ
ಪೂಯೇತ ಯೇನ ಹಿ ಪುನಾನನುವರ್ಣಿತೇನ ॥ ೫ ॥

ಸರ್ವಶಕ್ತನಾದ ಭಗವಂತನನ್ನು ಪೂರ್ಣವರ್ಣಿಸಲು ನಾನು ಅಸಮರ್ಥ. ಆದರೂ ಎಲ್ಲಾ ವರ್ಣಿಸುವೆನೆಂಬ ಹಂಬಲ ತುಂಬಿದೆ. ಭಕ್ತಿಯಿಂದ ಯಥಾಮತಿ ವರ್ಣಿಸುತ್ತೇನೆ. ಪ್ರಕೃತಿಯ ಬಂಧನಕ್ಕೆ ಸಿಲುಕಿ ಶಕ್ತಿಹೀನರಾಗಿ ಸಂಸಾರವಸ್ಥೆಯಲ್ಲಿ ಬಿದ್ದಿರುವ ಜನರನ್ನು ಈ ಭಗವಂತನ ಸ್ತುತಿಯು ಪವಿತ್ರಗೊಳಿಸುತ್ತದೆ. ಅತ್ಯಂತ ಹಸಿವೆಯಾದ ವ್ಯಕ್ತಿಗೆ ಮಾಡಿದ ಎಲ್ಲಾ ಆಹಾರವನ್ನೂ ತಿನ್ನುವೆನೆಂಬ ಭಾವವು ಬರುತ್ತದೆ. ಆದರೆ ತಿನ್ನುವಾಗ ಉದರದ ಪ್ರಮಾಣದ ಜ್ಞಾನವಾಗಿ ನಾಚುತ್ತಾನೆ. ಇದರಂತೆ ಬ್ರಹ್ಮಾಂಡದ ನಾಯಕನನ್ನು ಪೂರ್ಣ ತಿಳಿಯುವ ಹಂಬಲವುಳ್ಳವನಾಗಿ ಪ್ರವೃತ್ತನಾದ ಭಕ್ತನು ಕೊನೆಗೆ ಪಿಂಡಾಂಡದ ಪ್ರಮಿತಿಯು ಜ್ಞಾನವಾಗಿ ನಾಚಿ ಯೋಗ್ಯತೆಗೆ ತಕ್ಕಷ್ಟು ತೃಪ್ತಿಯು ಸ್ತುತಿಗೈದು ಫಲಭಾಗಿಯಾಗುತ್ತಾನೆಂಬ ಭಾವವು.

ಸರ್ವೇ ಹ್ಯಮೀ ವಿಧಿಕರಾಸ್ತವ ಸತ್ವಧಾಮ್ನೋ
ಬ್ರಹ್ಮಾದಯೋ ವಯಮಿವೇಶನ ಚೋದ್ವಿಜಂತಃ ॥
ಕ್ಷೇಮಾಯ ಭೂತಯ ಉತಾತ್ಮಸುಖಾಯ ಚಾಽಸ್ಯ
ವಿಕ್ರೀಡಿತಂ ಭಗವತೋ ರುಚಿರಾವತಾರೈಃ ॥ ೬ ॥

ಪ್ರಭುವಾದ ನಾರಸಿಂಹನೇ! ನಾನು ಮಾತ್ರ ದಾಸನಲ್ಲದೆ ಬ್ರಹ್ಮಾದಿ ಸಮಸ್ತ ಸಮೂಹವೇ ಅಚಿಂತ್ಯಾದ್ಭುತ ಶಕ್ತಿಯುಳ್ಳ ನಿನ್ನ ಆಜ್ಞಾಧಾರಕ ದಾಸಾನುದಾಸರು. ಆದರೆ ಉದ್ವೇಗರಹಿತರಾದ ಬ್ರಹ್ಮಾದಿಗಳು ನಮಗಿಂತ ಉತ್ತಮರು. ಆದ್ದರಿಂದ ಅವರ ಕ್ಷೇಮಸುಖಕ್ಕಾಗಿ ಹಾಗೂ ನಿರಂತರ ಸ್ವರೂಪಸುಖದ ಅವಸ್ಥೆಗಾಗಿ ಶ್ರೀಹರಿಯ ಸುಂದರ ಲೀಲಾವತಾರಗಳ ಪ್ರಸಿದ್ಧಿಯು ಹಾಗೆಯೇ ಲೋಕದಲ್ಲಿಯೂ ಪ್ರಸಿದ್ಧವಷ್ಟೇ? ವಿಧಿ–

Rarest Archiver

ನಿಷೇಧ ಬದ್ಧರಾದ ನಾವು ಪ್ರತ್ಯವಾಯ ಭಯದಿಂದ ಮಾಡುವ ಪೂಜಾದಿ ಸೇವೆಗಳಿಗಿಂತ ಪರಮಾತ್ಮನ ಸಂಕಲ್ಪವೇ ನಮ್ಮ ಸಂಕಲ್ಪವೆಂದು (ಚಿತ್ತವೃತ್ತಿರನುವೃತ್ತಿಮಾನ್) ಮಾಡುವ ಬ್ರಹ್ಮಾದಿಗಳಲ್ಲಿಯೇ ಪ್ರೀತಿಯು ಎಂಬ ತಾತ್ಪರ್ಯ.

ತದ್ಯಚ್ಛ ಮನ್ಯುಮಸುರಶ್ಚ ಹತಸ್ತ್ವಯಾದ್ಯ
ಮೋದೇತ ಸಾಧುರಪಿ ವೃಶ್ಚಿಕಸರ್ಪಹತ್ಯಾ ॥
ಲೋಕಾಶ್ಚ ನಿರ್ವೃತಿಮಿತಾಃ ಪ್ರತಿಯಾಂತು ಸರ್ವೇ
ರೂಪಂ ನೃಸಿಂಹ ವಿಭವಾಯ ಜನಾಸ್ಸ್ಮರಂತಿ ॥ ೭ ॥

ಅಸುರವರ್ಯನಾದ ಹಿರಣ್ಯಕಶಿಪು ಈ ದಿನ ನಿನ್ನಿಂದ ಹತನಾಗಿದ್ದಾನಷ್ಟೆ. ಕಾರ್ಯಕಾರಣ ಸಂಬಂಧದಂತೆ ಈ ನಿನ್ನ ಭಯಂಕರ ಕೋಪವನ್ನು ಮುಕ್ತಗೊಳಿಸು. ಕಂಟಕಪ್ರಾಯವಾದ ಹಾವು-ಚೇಳುಗಳನ್ನು ಕೊಂದರೆ ಲೋಕದಲ್ಲಿ ಅಹಿಂಸಾವಾದಿಯೂ ಸಂತೋಷಪಡುತ್ತಾನೆ. ಮೋದಸ್ವರೂಪಿಯಾದ ನರಹರಿಯೇ ನಿನಗೆ ಸಂತೋಷವಿಲ್ಲವೇ? ಈ ನಿನ್ನ ಕೋಪವನ್ನು ತ್ಯಜಿಸಿದರೆ ಭಕ್ತರಾದ ದೇವತೆಗಳು ಸಂತಸಪಟ್ಟು ತಮ್ಮ ತಮ್ಮ ನೆಲೆಗೆ ಮರಳುತ್ತಾರೆ. ಎಂದಿಗೂ ಸರ್ವವಿಘ್ನ ನಿವಾರಣೆಗೆ ಈ ನರಸಿಂಹರೂಪವನ್ನೇ ಚಿಂತಿಸುತ್ತಾರೆ. ದುಷ್ಟ ಅಭಿಮಾನಗ್ರಸ್ತವಾದ ಯಾವುದೇ ಸ್ಥಾನ-ಮಾನಗಳಿಗೂ ವಿಷ್ಣುವೆಂಬ ಧರ್ಮವು ಎಂದಿಗೂ ಸಿಗುವುದಿಲ್ಲ. ಹಾಗೆಯೇ ದುಷ್ಟಮತದ ಅಭಿಮಾನಕ್ಕೂ ಸಿಲುಕದವನು. ಮಧ್ವಸಿದ್ಧಾಂತವೆಂಬ ನರಸಿಂಹನ ರೂಪವನ್ನೇ ಸದಾ ಚಿಂತಿಸಬೇಕೆಂದು ಭಾವವು.

ನಾಹಂ ಬಿಭೇಮ್ಯಜಿತ ತೇಽತಿಭಯಾನಕಸ್ಯ
ಜಿಹ್ವಾಗ್ನಿನೇತ್ರಭ್ರುಕುಟೀರಭಸೋಗ್ರದಂಷ್ಟ್ರಾತ್ ॥
ಆಂತ್ರಸ್ರಜಃ ಕ್ಷತಜಕೇಸರ ಶಂಕುಕರ್ಣಾತ್
ನಿರ್ಹ್ರಾದಭೀತ ದಿಗಿಭಾದರಿಭಿನ್ನಕಾಗ್ರಾತ್ ॥ ೮ ॥

ಜಯಸ್ವರೂಪಿ ನಾರಸಿಂಹನೇ! ಅತಿಭಯಂಕರವಾದ ಈ ನಿನ್ನ ಜಿಹ್ವಾಗ್ನಿಗಾಗಲಿ,ವಕ್ರನೋಟಕ್ಕಾಗಲೀ, ಹುಬ್ಬು ಸುರುಳಿಗಳ ಗಂಟಿಗಾಗಲೀ, ಕೋರೆದಾಡೆಯ ಪಂಕ್ತಿಗಳಿಗಾಗಲೀ ನಾನು ಅಂಜುವುದಿಲ್ಲ. ಅಂತೆಯೇ

Rarest Archiver

ಆಂತ್ರಮಾಲೆಗಾಗಲೀ, ರಕ್ತಸಿಕ್ತನಿಮಿರಿದ ಕೆಂಪಾದ ಕಿವಿಗಳಿಗಾಗಲೀ, ದಿಗ್ಗಜಗಳನ್ನೂ ಧಿಕ್ಕರಿಸುವ ಘರ್ಜನೆಗಾಗಲೀ, ಶತ್ರುಗಳನ್ನು ಸಿಗಿದುಹಾಕುವ ಕ್ರೂರ ಉಗುರುಗಳಿಗಾಗಲೀ ನಾನು ಹೆದರಲಾರೆನು. ಅಥಏವ ದೇವರ ಅನುಗ್ರಹಾರ್ಥವಾಗಿ ಮಾಡುವ ಯಾವುದೇ ಶಾಸ್ತ್ರೀಯ ಕರ್ಮಾನುಷ್ಠಾನವು ಭಯಂಕರವಾಗಿ ಕಂಡರೂ, ಸಾಧಕನಿಗೆ ಭಯಪ್ರದವಲ್ಲವೆಂಬ ಭಾವವು.

ತ್ರಸ್ತೋಽಸ್ಮ್ಯಹಂ ಕೃಪಣವತ್ಸಲ ದುಃಸ್ಸಹೋಗ್ರ
ಸಂಸಾರಚಕ್ರ ಕದನಾತ್ಕೃಶತಾಂ ಪ್ರಣೀತಃ ॥
ಬದ್ಧಃ ಸ್ವಕರ್ಮಭಿರುಶತ್ತಮ ತೇಂಘ್ರಿಮೂಲವ್
ಭೀತಾಪವರ್ಗಮರಣಂ ಸಮಿಯಾಂ ಕದಾನು ॥ ೯ ॥

ಕೃಪಣವತ್ಸಲ ನರಹರಿಯೇ, ಆದರೂ ನಾನು ಹೆದರುತ್ತಿದ್ದೇನೆ. ಸಹಿಸಲಶಕ್ಯವೂ, ಘೋರವೂ ಆದ ಸಂಸಾರಚಕ್ರದಲ್ಲಿ ಸಿಲುಕಿ ಕೃಶನಾಗಿದ್ದೇನೆ. ಸ್ವಯಂಕೃತಾಪರಾಧ ಕರ್ಮಗಳಿಂದ ಬಂಧನಕ್ಕೆ ಸಿಲುಕಿದ್ದೇನೆ. ಹೇ ದಯಾಮಯ! ಭವಭೀತರಿಗೆ ಭಯಪರಿಹರಿಪ ನಿನ್ನ ಪಾದಮೂಲಾಶ್ರಯ ಒಂದೇ, ಗತ್ಯಂತರವಿಲ್ಲ. ಆ ನಿನ್ನ ಪದಪ್ರಾಪ್ತಿಯು ಎಂದಿಗೆ. ಅರ್ಥಾತ್ ಭಗವಂತನ ದಯೆಯಿಲ್ಲದ ಕೇವಲ ನಮ್ಮ ಪ್ರಯತ್ನಗಳು ಈ ಸಂಸಾರದಿಂದ ಬಿಡುಗಡೆಮಾಡಲಾರವು.

ಯಸ್ಮಾತ್ ಪ್ರಿಯಾಪ್ರಿಯವಿಯೋಗ ಸಯೋಗಜನ್ಮ
ಶೋಕಾಗ್ನಿನಾ ಸಕಲ ಯೋನಿಷು ದಹ್ಯಮಾನಃ ॥
ದುಃಖೌಷಧಂ ತದಪಿ ದುಃಖಮತದ್ಧಿಯಾಽಹವ್
ಭೂಮನ್ಭ್ರಮಾಮಿ ವದಮೇ ತವದಾಸ್ಯಯೋಗವ್ ॥ ೧೦ ॥

ಹೇ ಪರಿಪೂರ್ಣನೇ! ಅತ್ಯಂತಪ್ರಿಯವಾದ್ದನ್ನು ಕಳೆದುಕೊಂಡು, ಅಪ್ರಿಯವನ್ನೇ ಹೊಂದುವುದರಿಂದ ಉತ್ಪನ್ನವಾದ ಶೋಕಾಗ್ನಿಗೆ ಜನುಮಜನುಮಗಳಲ್ಲಿ ಆಹುತಿಯಾಗಿ ಬೆಂದು ಬಳಲಿದ್ದೇನೆ. ದುಃಖದೂರಾಗುವುದೆಂದು ಯಾವುದನ್ನು ಹಿಡಿಯುವನೋ ಅದು ಮತ್ತೂ ಮತ್ತೂ ದುಃಖಕ್ಕೆ ಕಾರಣವಾಗಿದೆ. ಆದ್ದರಿಂದ ದುಃಖಪರಿಹರಿಪ ಮಾರ್ಗವನ್ನೇ ಕಾಣದೆ ಸಂಸಾರದಲ್ಲಿ ಸುತ್ತುತ್ತಿದ್ದೇನೆ. ಎಲೈ ನರಸಿಂಹನೇ! ನಿನ್ನ ಪಾದದಾಸ್ಯವೊಂದೇ ಅದಕ್ಕೆ ಪರಿಹಾರ ಮಾರ್ಗ. ಆದಾಸ್ಯ ಭಾಗ್ಯವನ್ನು ದಯಪಾಲಿಸು.

Rarest Archiver

ಅಂದರೆ ಶ್ರೀಶದಾಸ ಮನೋಭಾವನೆಯ ನಿತ್ಯಸತ್ಯ ಉಪಾಸನೆಯ ಮಾರ್ಗವೇ ಮುಕ್ತಿಗೆ ಮೂಲವು.

ಸೋಹಂ ಪ್ರಿಯಸ್ಯ ಸುಹೃದಃ ಪರದೇವತಾಯಾ
ಲೀಲಾಕಥಾಸ್ತವ ನೃಸಿಂಹ ವಿರಿಂಚಗೀತಾಃ ॥
ಅಂಜಸ್ತಿತರ್ಮ್ಯನುಗೃಣನ್ ಗುಣವಿಪ್ರಮುಕ್ತೋ
ದುರ್ಗಾಣಿ ತೇ ಪದಯುಗಾಲಯ ಹಂಸಸಂಘಃ ॥ ೧೧ ॥

ಹೇ ನರಕೇಸರೀ! ಅನಿಮಿತ್ತಬಂಧುವೂ, ಪರದೇವತೆಯೂ, ಪ್ರಿಯನೂ ಆದ ನಿನ್ನ ಬಗ್ಗೆ ಬ್ರಹ್ಮಾದಿದೇವತೆಗಳು ಸ್ತುತಿಸುವ ಚರಿತ್ರಾತ್ಮಕ ಮಾಹಾತ್ಮೆಗಳನ್ನು ಕೇಳುತ್ತಾ-ಪಾಡುತ್ತಾ, ನಿನ್ನ ದಾಸಾನುದಾಸನಾದ ನಾನು ಈ ಪ್ರಕೃತಿಬಂಧದಿಂದ ವಿಮುಕ್ತನಾಗುತ್ತೇನೆ. ನಿನ್ನ ಪಾದೈಕಶರಣರಾದ ಪರಮಹಂಸ ಶ್ರೇಷ್ಠರ ಸೇವೆಯಿಂದ ಎಲ್ಲ ಅಡಚಣೆಗಳನ್ನು ದಾಟಿ ನಿಲ್ಲುತ್ತೇನೆ. ಭಗವಂತನನ್ನು ಬಲ್ಲವರ ಸೇವೆ ಹಾಗೂ ಅವರು ಮಾಡಿದ ಸ್ತೋತ್ರಪಠನ, ಅವರ ಪಾದೈಕಶರಣತ್ವವೇ ಪ್ರಕೃತಿಬಂಧದಿಂದ ಬಿಡುಗಡೆಯಾಗಲು ಮುಖ್ಯದ್ವಾರವೆಂಬ ಭಾವವು.

ಬಾಲಸ್ಯಚೇಹ ಶರಣಂ ಪಿತರೌ ನೃಸಿಂಹ,
ಆರ್ತಸ್ಯಚಾಗದಂ ಉದನ್ವತಿ ಮಜ್ಜತೋ ನೌಃ ॥
ತಪ್ತಸ್ಯ ತರ್ಪಣವಿಧಿರ್ಯದಿ ಆಂಜಸೇಷ್ಟಃ
ತದ್ವತ್ಪ್ರಭೋ ತನುಭೃತಾಂ ತ್ವದುಪಾಸಕಾನಾಮ್ ॥ ೧೨ ॥

ಎಲೈ ನರಸಿಂಹನೇ! ಮಗುವಿಗೆ ತಂದೆತಾಯಿಗಳೇ ಆಶ್ರಯ. ರೋಗಾದಿ ಉಪದ್ರವದಿಂದ ಬಳಲಿದವನಿಗೆ ಔಷಧವೇ ಗತಿ. ಸಾಗರದೊಳು ಮುಳುಗುವವಗೆ ದೋಣಿಯೇ ದಿಕ್ಕು. ಬೆಂದು ಬಳಲಿದವಗೆ ಜಲತರ್ಪಣದಿಂದಲೇ ತೃಪ್ತಿ. ಹಾಗೆಯೇ ನಿನ್ನನ್ನೇ ಸರ್ವಕಾಲದೊಳು ನೆನೆವ ಜೀವಕ್ಕೆ ನೀನೇ ಇಷ್ಟ-ಗತಿರನ್ಯಥ. ಸರ್ವಸುಖಕ್ಕೂ ಭಗವಂತನೇ ಕಾರಣವೆಂಬ ಭಾವಬಲ್ಲಭಕ್ತರು ಯಾವಸ್ಥಿತಿಯಲ್ಲಿಯೂ ಶ್ರೀಹರಿಯ ಸಂಬಂಧವನ್ನು ಬಿಡುವವರಲ್ಲವೆಂಬ ಭಾವ.

ಯಸ್ಮಿನ್ ಯತೋ ಯರ್ಹಿಚ ಯೇನ ಯಸ್ಯ

Rarest Archiver

ಯಸ್ಮೈ ಯಥಾ ಯಮುತ ಯಸ್ತ್ವಪರಃ ಪರೋ ವಾ ||
ಭಾವಃ ಕರೋತಿ ವಿಕರೋತಿ ಪೃಥಕ್ಸ್ವಭಾವಃ
ಸಂಚೋದಿಸ್ತದಖಿಲಂ ಭವತಃ ಸ್ವರೂಪಮ್ || ೧೩ ||

ನಿನ್ನಿಂದ ಭಿನ್ನವಾದ ಜಗತ್ತಿನ ಚೇತನಾಽಚೇತನ ಯಾವುದೇ ವಸ್ತು, ಎಲ್ಲಿಯೇ ಇರಲಿ, ಯಾವ ವಿಧರಿಂದಲೇ ಆಗಲಿ, ಯಾವಕಾಲದಲ್ಲಿಯೇ ಸರಿ ಯಾವ ಉಪಕರಣವೇ ಆಗಬಹುದು, ಯಾವಪ್ರಯೋಜನ-ಯಾರ ಉಪಕಾರಕ್ಕಾಗಲೀ ಒಟ್ಟಿನಲ್ಲಿ ಹೇಗೆಯೇ ಆಗಲೀ ಎನೇ ಮಾಡಲೀ ಅವೆಲ್ಲವೂ ನಿನ್ನ ಸಂಬಂಧದಿಂದ ಹೊರತಾದರೂ, ನಿನ್ನ ಪ್ರಚೋದನೆಯಂತೆ ಆಗಿದೆ ಎಂಬುದೆ ಸಿದ್ಧಾಂತ. ಇದರಿಂದ ಸರ್ವಜಗತ್ತೂ-ಯಾವತ್ತೂ ನಿನ್ನ ಅಧೀನವೆಂಬುದು ವೇದ್ಯವಷ್ಟೆ. ಅವ್ಯಕ್ತ-ಮಹದಹಂಕಾರಾದಿ ತತ್ವಾಭಿಮಾನಿಗಳಾದ ಬ್ರಹ್ಮಾದಿದೇವತೆಗಳು ಫಲನೀಡುವುದು ಸಿದ್ಧವಾದರೂ ಅವೆಲ್ಲವೂ ಸರ್ವತಂತ್ರ ಸ್ವತಂತ್ರನಾದ ಶ್ರೀಹರಿಯ ಅಧೀನವೆಂಬ ಮೂಲ ಜ್ಞಾನವಿರಬೇಕೆಂಬ ಭಾವವು.

ಮಾಯಾಮನಃ ಸೃಜತಿ ಕರ್ಮಮಯಂ ಬಲೀಯಃ
ಕಾಲೇನ ಚೋದಿತ ಗುಣಾನುಮತೇನ ಪುಂಸಃ ||
ಛಂದೋಮಯಂ ಯದಜಯಾರ್ಪಿತ ಷೋಡಶಾರಮ್
ಸಂಸಾರಚಕ್ರಮಜ ಕೋಽತಿತರೇತ್ತ್ವಧನ್ಯಃ || ೧೪ ||

ನಿರಂತರ ದೈವಸಂಬಂಧವಿದ್ದ ಈ ಪ್ರಕೃತಿಯು ತನ್ನ ಸತ್ವಾದಿ ತ್ರಿಗುಣಗಳ ಕ್ರಿಯೆಯನ್ನು ಚೇತನರಿಗೆ ನೀಡಲು ನಾನಾವಿಧ ಸುಖದುಃಖ ದುಮ್ಮಾನಗಳ ಕೇಂದ್ರವಾದ ಬಲಿಷ್ಠ ಜಡಮನಸ್ಸನ್ನು ಸೃಷ್ಟಿಸಿಬಿಡುತ್ತದೆ. ಅಂದಮೇಲೆ ಪ್ರಕೃತಿಯ ಷೋಡಶಕಲಾರೂಪ ಶಲಾಕೆಗಳೊಡನೆ ಬೆಸೆದ ಆ ಸಂಸಾರಚಕ್ರದಲ್ಲಿ ಮನಸ್ಸೇ ಪ್ರಧಾನವೆಂದು ಹೇಳುವುದೇನಿದೆ? ಹೇ ಸನಾತನ ಪುರುಷ! ನೀನಲ್ಲದೆ ಬೇರೆ ಯಾರೂ ಈ ಸಂಸಾರಚಕ್ರದಿಂದ ದಾಟಿಸಲು ಸಮರ್ಥರು. ಸಂಸಾರಚಕ್ರಕ್ಕೆ ಸಿಲುಕಿದ ಜೀವರಿಗೆ ಅಪ್ರಾಕೃತನಾದ ಭಗವಂತನಿಂದ ಮಾತ್ರವೇ ಉದ್ಧಾರವೆಂಬ ಭಾವವು.

ಸ್ವತಃ ಹಿ ನಿತ್ಯ ವಿಜಿತಾತ್ಮ ಗುಣಸ್ವಧಾಮ್ನಾ
ಕಾಲೋವಶೀಕೃತ ವಿಸೃಜ್ಯ ವಿಸರ್ಗ ಶಕ್ತಿಃ ||

Rarest Archiver

ಚಕ್ರೇವಿಸೃಷ್ಟಮಜಯೇಶ್ವರ ಷೋಡಶಾರೇ
ನಿಷ್ಪೀಡ್ಯಮಾನಮುಕಕರ್ಷ ವಿಭೋ ಪ್ರಪನ್ನಮ್ ॥ ೧೫ ॥

ಹೇ ರಮಾರಮಣ! ನೀನು ಸ್ವರಮಣನು. ನಿನಗೆ ಹುಟ್ಟುಸಾವುಗಳು ಎಲ್ಲಿವೆ? ಅಪ್ರಾಕೃತನಾದ ನಿನಗೆ ಚೇತನನಿಗಾಗುವ ದುಃಖಾದಿಗಳ ವಿಕಾರವೆಲ್ಲಿ ಬಂತು? ಜಗದ್ವಿಲಕ್ಷಣನೆಂದೆನಿಸಿ ಸರ್ವಜ್ಞನಾಗಿ ಸೃಷ್ಟಿಗೊಳಪಟ್ಟ ವಸ್ತುಗಳ ವಿವಿಧ ಸೃಷ್ಟಿ ನಿನ್ನ ವಶವೇ ಆಗಿ ಕಾಲನೆಂದೆನಿಸಿದೆ. ನಾನಾದರೋ ಷೋಡಶಕಂಟಕ ಸಂಸಾರಚಕ್ರದಲ್ಲಿ ಬಿದ್ದು ನೊಂದಿರುವೆ. ಹೇ ಪ್ರಭೋ! ಹೋಲಿಕೆ ಎಂತು? ನಿನಗೆ ಸರ್ವದಾ ಶರಣಾಗಿರುವೆ. ಶರಣಾರ್ಥಿಯಾದ ಎನ್ನನುದ್ಧರಿಸುವ ಭಾರ ನಿನ್ನದಯ್ಯ.

ದೃಷ್ಟ್ವಾ ಮಯಾ ದಿವಿ ವಿಭೋಽಖಿಲ ದಿಷ್ಣ್ಯಪಾನಾಮ್
ಆಯುಃ ಶ್ರಿಯೋ ವಿಭವ ಇಚ್ಛತಿ ಯಾನ್ ಜನೋಽಯಮ್ ॥
ಯೇಽಸ್ಮತ್ಪಿತುಃ ಕುಪಿತಹಾಸವಿಜೃಂಭಿತಭ್ರೂ
ವಿಸ್ಫೂರ್ಜಿತೇನ ಲುಲಿತಾಃ ಸತುತೇ ನಿರಸ್ತಃ ॥ ೧೬ ॥

ಹೇ ಸರ್ವಶಕ್ತನೇ! ಆಯಾ ಲೋಕಪಾಲಕರಿಗೆ ಸ್ವರ್ಗಾದಿಗಳಲ್ಲಿ ಸಿಗುವ ಸುಖಕಾರಕ ಸಂಪತ್ತು– ವೈಭೋಗ– ಇದಕ್ಕೆ ಮೂಲವಾದ ಆಯಸ್ಸು ಎಷ್ಟೆಂಬ ವಿಷಯಗಳು ಈ ಜಗತ್ತಿನ ಜನಸಮುದಾಯಕ್ಕೆ ಇಷ್ಟವೇ ಆಗಬಹುದು. ಆದರೆ ಈ ಸುಖ ಭೋಕ್ತರನ್ನು ವಿಮರ್ಶೆಯಿಂದ ಕಂಡಿದ್ದೇನೆ. ಹೇಳುವುದೇನು? ನನ್ನ ತಂದೆಯ ಅಟ್ಟಹಾಸಯುಕ್ತ ಹುಬ್ಬಿನ ಕುಣಿತಮಾತ್ರದಿಂದಲೇ ಆ ಎಲ್ಲ ಸಂಪತ್ತು ಹತವಾಯ್ತು. ಅಂತಹ ನಮ್ಮಪ್ಪ ಹಿರಣ್ಯಕಶಿಪು ಕೂಡ ನರಸಿಂಹನಾದ ನಿನ್ನಿಂದ ಹತನಾಗಿದ್ದಾನೆ. ನಶ್ವರ ಸಂಪತ್ತು ಹಂತ ಹಂತವಾಗಿ ಬಲಿಷ್ಟರನ್ನು ಆಶ್ರಯಿಸುತ್ತದೆಂದನ್ನು ಪ್ರತ್ಯಕ್ಷವಾಗಿ ಕಂಡ ನನಗೆ ನಿನ್ನ ಶಾಶ್ವತಜ್ಞಾನ ಸಂಪತ್ತನ್ನು ದಯಪಾಲಿಸೆಂಬ ಭಾವವು.

ತಸ್ಮಾದಮೋಸ್ತನುಭೃತಾಮಹಮಾಶಿಶೋಗ್ನ
ಆಯುಃ ಶ್ರಿಯಂ ವಿಭವಮೈಂದ್ರಿಯಮಾವಿರಿಂಚಾತ್ ॥
ನೇಚ್ಛಾಮಿ ತೇ ವಿಲುಲಿತಾ ಉರುವಿಕ್ರಮೇಣ
ಕಾಲಾತ್ಮನೋಪನಯಮಾಂ ನಿಜಭೃತ್ಯಪಾರ್ಶ್ವಮ್ ॥ ೧೭ ॥

Rarest Archiver

ಆದಕಾರಣ ಬ್ರಹ್ಮದೇವರ ಪರ್ಯಂತ ಇರುವ ಆಯಸ್ಸು-ಐಶ್ವರ್ಯ- ವೈಭವಯುಕ್ತ ಐಂದ್ರಿಯಿಕ ಭೋಗವಿಲಾಸಾದಿಗಳನ್ನು ಲೋಕದಲ್ಲಿ ಜನರೆಲ್ಲ ಬಯಸಿದರೂ, ನಾನು ಅವುಗಳನ್ನು ನಿನ್ನಬಳಿ ಬಯಸುವುದಿಲ್ಲ. ಹೇ ಅಭಯಪ್ರದ! ಸರ್ವಶಕ್ತಿಶಾಲಿ ಪರಾಕ್ರಮಿ, ಕಾಲಾತ್ಮಕ ನಿನ್ನಿಂದ ಅವೆಲ್ಲವೂ ಅಂತ್ಯವಾಗುವುದಷ್ಟೆ. ಆದ್ದರಿಂದ ನನ್ನನ್ನು ನಿನ್ನ ಸೇವಕಪರಿವಾರದಲ್ಲಿ ಪರಿಗ್ರಹಿಸಿ- ಅನುಗ್ರಹಿಸ ಬೇಕೆಂಬುದೇ ನನ್ನ ಬಯಕೆ. ಇತರ ಫಲಾಸೆಗಳನ್ನು ತೊರೆದು ಕೇವಲ ಶ್ರೀಹರಿಯನ್ನೇ ಬಯಸುವವ ನಿಜವಾದ ಭಕ್ತನೆಂಬ ಭಾವವು.

ಕುತ್ರಾಶಿಷಃ ಶ್ರುತಿಸುಖಾಮೃಗತೃಷ್ಣ ರೂಪಾಃ
ಕ್ವೇದಂ ಕಲೇವರ ಮಶೇಷರುಚಾಂ ವಿರೋಹಃ ॥
ನಿರ್ವಿದ್ಯತೇ ನತುಜನೋ ಯದಪೀಹ ವಿಧ್ವಾನ್
ಕಾಮಾನಲಂ ಮಧುಲವೈಃ ಶ್ರಮಯನ್ ದುರಾಪೈಃ ॥ ೧೮ ॥

ಇಂದ್ರಿಯಗಳಿಗೆ ಇಂಪಾದ ಮಾತಿನಕೃತಿಗೆ ನೆಲೆ-ಬೆಲೆ ಎಲ್ಲಿದೆ? ಅದು ಬಿಸಿಲು ಕುದುರೆಯಂತೆ ಅಥವಾ ಜಿಗಿದು ಕಾಮನಬಿಲ್ಲನ್ನು ಹಿಡಿದಂತೆ ಅಪ್ರಯೋಜಕ. ಸಮಸ್ತ ರೊಗ-ರುಜಿನಗಳಿಗೂ ಉಗಮ ಸ್ಥಾನವಾದ ಈ ಕಾಯಕ್ಕೇನು ಮಹತ್ವ? ಇಂತಿದ್ದೂ ಕ್ಲಿಷ್ಟದಿಂಗಳಿಸಿದ ವಿಷಯಭೋಗವೆಂಬ ಜಲಧಾರೆಗಳಿಂದ ಕಾಮದ ಕಾಳ್ಗಿಚ್ಚನ್ನು ನಂದಿಸಲು ಶ್ರಮಪಟ್ಟ ವಿದ್ವಾಂಸನಿಗೂ ವೈರಾಗ್ಯಬರಲಾರದು. ಸಾಮಾನ್ಯನಿಗಂತೂ ಹೇಳತೀರದು. ಆದ್ದರಿಂದ ವಿಷಯಭೋಗ ತೊರೆದೇ ಕಾಮಾಗ್ನಿಯನ್ನು ನಂದಿಸಲು ಶ್ರಮಿಸಬೇಕೆಂದು ಅಭಿಮತವು.

ಕ್ವಾಹಂ ರಜಃ ಪ್ರಭವ ಈಶ ತಮೋಽಧಿಕೇಸ್ಮಿನ್
ಜಾತಃ ಸುರೇತರ ಕುಲೇ ಕ್ವ ತವಾನುಕಂಪ ॥
ನ ಬ್ರಹ್ಮಣೋ ನತು ಭವಸ್ಯ ನ ವೈ ರಮಾಯಾಃ
ಯನ್ಮೇರ್ಪಿತಃ ಶಿರಸಿ ಪದ್ಮ ಕರಪ್ರಸಾದಃ ॥ ೧೯ ॥

ಎಲೈ ಲಕ್ಷ್ಮೀಶನೇ! ರಜೋಗುಣದ ಕಟ್ಟಿನಿಂದ ಪುಟ್ಟಿ ತಾಮಸ ಗುಣವೇ ನಿಬಿಡವಾಗುಳ್ಳ ಈ ದೈತ್ಯಕುಲದಲ್ಲಿ ಜನಿಸಿದ ನಾನೆಲ್ಲಿ? ನಿನ್ನ ಅನುಗ್ರಹದ ಪರಕಾಷ್ಠತೆಯ ಅನುಕಂಪವೆಲ್ಲಿ? ರಮಾಬ್ರಹ್ಮಾದಿಗಳ ಮಸ್ತಕಕ್ಕಿಲ್ಲದ ಈ ನಿನ್ನ ಕಮಲದಂತಿರುವ

Rarest Archives

ಅಭಯಹಸ್ತವಿಟ್ಟ ಪ್ರಸಾದಪುಷ್ಪ ನನ್ನ ತಲೆಯಮೇಲೆ ನೀಡುವ ಈ ನಿನ್ನ ದಯದ ನಡೆತೆ ಅಚಿಂತ್ಯಾದ್ಭುತವಾಗಿದೆ. ರಮಾಬ್ರಹ್ಮಾದಿಗಳಿಗೆ ನಿತ್ಯನಿಯತ ತಾರತಮ್ಯೋಪೇತ ಅನುಗ್ರಹದ ಮಹಿಮೆ ಸತ್ಯವಾಗಿದ್ದರೂ ತತ್ಕಾಲೀನ ಅನುಗ್ರಹದ ಹಿರಿಮೆಗಳನ್ನೂ ಬ್ರಹ್ಮಾದಿಗಳು ಅನುಮೋದಿಸುವರು. ಇದರಿಂದ ನಿತ್ಯ ತಾರತಮ್ಯಕ್ಕೆ ಚ್ಯುತಿ ಇಲ್ಲವೆಂಬ ಭಾವವು.

ನೈಶಾಪರಾವರಮತಿರ್ಭವತೋ ನನುಸ್ಯ
ಜ್ಜಂತೋರ್ಯಥಾತ್ಮ ಸುಹೃದೋ ಜಗತಸ್ತಥಾಪಿ ॥
ಸಂಸೇವಯಾ ಸುರತರೋರಿವ ತೇ ಪ್ರಸಾದಃ
ಸೇವಾನುರೂಪ ಉದಯೋ ನ ಪರಾವರತ್ವಮ್ ॥ ೨೦ ॥

ಎಲೈ ನರಸಿಂಹನೇ! ಗುಣವೈಷಮ್ಯ ದೂರನಾದ ನಿನಗೆ ಸ್ವಕೀಯ- ಪರಕೀಯ, ಉಚ್ಚ-ನೀಚ ವೆಂಬ ಭಾವವೆಲ್ಲಿದೆ? ಅಥವಾ ಜಗದ ಜೀವರೆಲ್ಲರನ್ನೂ ಪ್ರೀತಿಸುವ ಆತ್ಮೀಯ ಮಿತ್ರನಾಗಿದ್ದೀಯೆ. ಸೇವಾನುಗುಣವಾಗಿ ಕಲ್ಪವೃಕ್ಷವು ಫಲ ನೀಡುವಂತೆ ನೀನೂ ಜೀವರ ಸೇವೆಗೆ ತಕ್ಕಂತೆ ಅನುಗ್ರಹಫಲವನ್ನು ನೀಡುವವನು. ಹಾಗೂ ಉಚ್ಚ-ನೀಚ ಜಾತಿಯ ದೆಸೆಯಿಂದಲೂ ಫಲದಲ್ಲಿ ವ್ಯತ್ಯಾಸ ಮಾಡುವ ನಿಯಮಧವನಲ್ಲ. ಆದ್ದರಿಂದ ದೇವರ ಸೇವೆಯನ್ನು ಯಾರು- ಯಾವಾಗ-ಎಲ್ಲಿ- ಯಾತಕ್ಕಾಗಿ-ಯಾವ ಉದ್ದೇಶದ ಭಾವನೆಯಿಂದ ಮಾಡುವರೋ ಅದರಂತೆ ಉತ್ತಮಾಽಧಮ ಫಲವನ್ನು ಹೊಂದುವರೆಂಬ ಭಾವವು.

ಏವಂ ಜನಂ ನಿಪತಿತಂ ಪ್ರಭವಾಹಿ ಕೂಪೇ
ಕಾಮಾಭಿಕಾಮಮನುಯಃ ಪ್ರಪತನ್ ಪ್ರಸಂಗಾತ್ ॥
ಕೃತ್ವಾಽತ್ಮ ಸಾತ್ಸುರರ್ಷಿಣಾ ಭಗವನ್ ಗೃಹೀತಃ
ಸೋಽಹಂ ಕಥಂ ನು ವಿಸೃಜೇ ತವ ಭೃತ್ಯಸೇವಾಮ್ ॥ ೨೧ ॥

ಹೇ ದಯಾಪೂರ್ಣನೇ! ಪ್ರಾಣಕ್ಕಿಂತ ಮಿಗಿಲಾಗಿ ವಿಷಯಗಳನ್ನು ಭೋಗಿಸುವ ಜನರ ಸಂಗ ಮಾಡಿ ಅವರಂತೆ ಪುನಃ ಪುನಃ ಹುಟ್ಟೆಂಬ ಹಾವಿನ ವಿಷದ ಮಡುವಿನಲ್ಲಿ ಜಾರಿ ಬಿದ್ದಿರುವವನನ್ನು, ದಯಾವಂತ ದೇವಋಷಿ ನಾರದರು ತನ್ನವನೆಂಬ ಮಮತೆಯಿಂದ ಈ ವಿಷಹ್ರದದಿಂದ ಎತ್ತಿ ಉದ್ಧರಿಸಿದರು. ದಯಾವಂತ ಮಹಾತ್ಮರಿಂದ

Rarest Archiver

ಪಾರಾಗಿ ಬಂದ ನಾನು ಆ ನಿನ್ನ ದಾಸರ ಪಾದ ಸೇವೆಯನ್ನು ನಿರ್ಲಕ್ಷಿಸುವುದಾದರೂ ಹೇಗೆ? ಆದ್ದರಿಂದ ಮಹಾತ್ಮರು ಈ ಸಂಸಾರದ ಅಸಾರವನ್ನು ತಿಳಿಸಿದ ಮೇಲೆ ಸಾರಾತ್ ಸಾರತರನಾದ ಹರಿಯನ್ನು ಹೊಂದುವ ಹಂಬಲ ಉಳ್ಳವರಾಗಬೇಕೆಂಬ ಭಾವವು.

ಮತ್ಪ್ರಾಣ ರಕ್ಷಣಮನಂತ ಪಿತುರ್ವಧಂಚ
ಮನ್ಯೇ ಸ್ವಭೃತ್ಯ ಋಷಿವಾಕ್ಯ ಮೃತಂ ವಿಧಾತುಮ್ ॥
ಖಡ್ಗಂ ಪ್ರಗೃಹ್ಯ ಯದವೋಚಥ ಸದ್ವಿಧಿತ್ಸುಃ
ತ್ವಾಮೀಶ್ವರೋ ಮದಪರೋಽವತು ಕಂ ಹರಾಮಿ ॥ ೨೨ ॥

ಎಲೈ ಅನಂತನೇ! ನನ್ನಿಂದ ಇಂದಿಗೂ ಸಿಗದ ಆ ನಿನ್ನ ವಿಷ್ಣುವು ಇಂದು ನಿನ್ನನ್ನು ಕಾಪಾಡಲಿ ಈಗಲೇ ನಿನ್ನ ತಲೆ ತೆಗೆಯುವೆ ಎಂದು ಘರ್ಜಿಸುತ್ತಾ ಖಡ್ಗ ಎತ್ತಿದ ಅಸುರನ ಮಾತನ್ನು ಸುಳ್ಳು ಮಾಡುವವನಾಗಿ, ನನ್ನ ಪ್ರಾಣ ರಕ್ಷಿಸಿದೆ. ಹಾಗೂ ನನ್ನ ಎದುರಿಗೆ ಹಿರಣ್ಯಕನ ಉದರ ಬಗೆದೆ. ಈ ವ್ಯಾಪಾರ ನಿನ್ನ ಸೇವಕರಾದ ನಾರದರ ಮತ್ತು ಭಕ್ತಸಮೂಹದ ಮಾತನ್ನು ನಿಜಮಾಡಲೆಂದೇ ಭಾವಿಸುವೆ. ಅರ್ಥಾತ್ ಆಸ್ತಿಕ-ನಾಸ್ತಿಕ ವೆಂಬ ವಾಗ್ಯುದ್ಧದಲ್ಲಿ, ಎಂದಿಗೂ ಆಸ್ತಿಕತ್ವಕ್ಕೆ ಜಯವೆಂಬ ಈ ವಾದಿದಂತೀಂದ್ರನ ಪ್ರತ್ಯಕ್ಷ ನಿದರ್ಶನವೆಂಬ ಭಾವವು.

ಏಕಸ್ತ್ವಮೇವ ಜಗದೇತದಮುಷ್ಯಯತ್ತ್ವಮ್
ಆದ್ಯಂತಯೋಃ ಪೃಥಗವಸ್ಯಸಿ ಮಧ್ಯತಶ್ಚ ॥
ಸೃಷ್ಟ್ವಾ ಗುಣವತಿಕರಂ ನಿಜಾಮಾಯಯೇದಮ್
ನಾನೇವ ತೈರವಸಿ ತಸ್ತದನು ಪ್ರವಿಷ್ಟಃ ॥ ೨೩ ॥

ಎಲೈ ಅಮರೇಶನೇ! ಈ ಜಗತ್ತು ಇದೆ ಎಂದಾದರೆ ಅದು ನಿನ್ನಿಂದಲೇ ಎಂಬುದು ಸಿದ್ಧಾಂತ. ಕಾರಣ ಜಗತ್ತಿನ ಸೃಷ್ಟಿ-ಸ್ಥಿತಿ-ಲಯ ಕರ್ತನಾದ್ದರಿಂದ, ಹಾಗೂ ಸತ್ವ-ರಜ-ತಮ ಗುಣವೈಪರೀತ್ಯ ರೂಪವಾದ ಇದರ ಆದಿ-ಅಂತ್ಯ-ಮಧ್ಯಗಳಲ್ಲಿ ಪ್ರಕೃತಿಯ ವಿಕಾರವಿಲ್ಲದೇ ತದಾಕಾರ-ತದ್ಭಿನ್ನ-ತದ್ವಾಚ್ಯನಾಗಿ ವಿಲಕ್ಷಣನಾಗಿರುವವ ನೀನೊಬ್ಬನೇ. ಮತ್ತು ವ್ಯಾಪ್ತನಾದ ನೀನು ನಾನಾರೀತಿಯಾಗಿ ತೋರುವೆ. ಒಬ್ಬನೇ ಅನೇಕವಾದಂತೆ ತೋರುವುದೇ ನಿನ್ನ ಮಾಯೆ. ಒಬ್ಬನೇ ಅನಂತವಾಗಿ ಭೇದಾಽಭೇದ

Rarest Archiver

ರೂಪನಾಗಿ ತೋರುವ ಸವಿಶೇಷವೆಂಬ ಗುಣದ ಪ್ರಮೇಯವನ್ನು ಚಿಂತಿಸಬೇಕೆಂಬ ಭಾವವು.

ತ್ವಂ ವಾ ಇದಂ ಸದಸದೀಶ ಭವಾನ್ಸ್ತತೋಽನ್ಯೋ
ಮಾಯಾಯದಾತ್ಮ ಪರಬುದ್ಧಿರಿಯಂ ಹ್ಯಪಾರ್ಥಾ ॥
ಯದ್ ಯಸ್ಯ ಜನ್ಮ ನಿಧನಂ ಸ್ಥಿತಿರೀಕ್ಷಣಂ ಚ
ತದ್ ವೈ ತದೇವ ಖಲು ಕಾಲವದುಷ್ಟಿತರ್ವೋಃ ॥ ೨೪ ॥

ಎಲೈ ಜಗದೀಶನೇ! ಈ ಚರಾಽಚರ ಪ್ರಪಂಚ ನೀನೇ ಎಂದರೂ ಅಪ್ರಾಕೃತನಾದ ನೀನು ಅದರಿಂದ ಭಿನ್ನನೇ ಆಗಿರುವೆ. ಜೀವವೇ ಪರಬ್ರಹ್ಮನೆಂದು ಚಿಂತಿಪುದು ತರವಲ್ಲ. ಪರಂತು ಅನರ್ಥ ಪರಂಪರೆಯ ತಪ್ಪು ಕಲ್ಪನೆ ಸರ್ವವೂ ಭಗವಂತ ಎಂಬುವ ವಾಕ್ಯದ ಮರ್ಮವು, ಯಾರ ಜನನ-ಮರಣ ಹಾಗೂ ಸ್ಥಿತಿಗತಿಗಳು ಯಾರಿಂದ ನಡೆಯುವುದೋ ಅದೂ ಅದೇ (ಅಸ್ತಿತ್ವವು) ಎಂದು ಹೇಳುವುದೇ ಆಗಿದೆ. ಒಣಗಿ ಕರಟಾದ ಗಿಡ ಮರಗಳು ಮತ್ತೆ ಚಿಗುರಿ ನಲಿದಾಡುವಾಗ, ಈ ಸ್ಥಿತಿಗತಿಗಳನ್ನು ನೇರವಾಗಿ ಅವಕ್ಕೆ ಹೇಳದೆ ಕಾಲಕ್ಕೆ ಅನ್ವಯಿಸುವಂತೆ. ಭಗವಂತನಿಂದ ಪ್ರವೃತ್ತವಾದ ಈ ಜಗತ್ತನ್ನು ಭಗವಂತನೇ ಎಂಬುವುದು ಜಗನ್ನಿಯಾಮಕ ಎಂದು ತಿಳಿಯುವುದು. ಮತ್ತು ಎಲ್ಲವೂ ಭಗವಂತ ಎಂಬ ಮಾತಿಗೆ, ಮತ್ತು ಎಲ್ಲದರಲ್ಲೂ ಭಗವಂತ ಎಂಬ ಅಂತರ್ಯಾಮಿತ್ವದ ಚಿಂತನೆಯ ಭಾವವು.

ನ್ಯಸ್ಯೇದಮಾತ್ಮನಿ ಜಗದ್ವಿಲಯಾಂಬುಮಧ್ಯೇ
ಶೇಷಾಸನೋ ನಿಜಸುಖಾನುಭವೋ ನಿರೀಹಃ ॥
ಯೋಗೇನ ಮೀಲಿತದೃಗಾತ್ಮನಿಪೀತನಿದ್ರ
ತುರ್ಯಸ್ಥಿತೋ ನನು ತಮೋನುಗುಣಾಂಶ್ಚ ಯುಕ್ತೇ ॥ ೨೫ ॥

ಪರಮಾತ್ಮನು ತನ್ನ ಉದರದಿಂದ ತೆಗೆದ ಜಗವನ್ನು ಮತ್ತೆ ಉದರದಲ್ಲಿಟ್ಟು, ಪ್ರಲಯಾಂಬು ಮಧ್ಯದಲ್ಲಿ ಶೇಷಾಸನನಾಗಿದ್ದು [ರಮಾತ್ಮಕ ವಟಪತ್ರವೇ ಶೇಷ, ಪ್ರಲಯಕಾಲದಲ್ಲಿ ನಿಜಶೇಷನೂ ಉದರದಲ್ಲಿರುವನು] ಸ್ವಆತ್ಮಾನಂದ ಪ್ರಕಾಶಾನುಭವಯುಕ್ತ ಯೋಗನಿದ್ರೆಯಿಂದ ಕಣ್ಣು ಮುಚ್ಚಿದಂತೆ ಕಂಡರೆ ಜಾಗೃತನಾಗಿ ಯಾವುದೇ ಪ್ರವೃತ್ತಿ ಮಾಡದೆ ತುರ್ಯಸ್ಥಿತಿಯಾದ ನೀನು ನಿನ್ನೊಳಗಿರುವ ಪ್ರಕೃತಿ

Rarest Archiver

ಮತ್ತು ಅದರ ಗುಣಕಾರ್ಯಗಳನ್ನು ನಿನ್ನಲ್ಲಿಯೇ ನಿಯೋಜಿಸಿಕೊಂಡಿರುವೆ. ಕಾರಣ ಪ್ರಕೃತಿಯೊಳಗೆ ಪ್ರವೇಶಿಸಿ ಪ್ರವೃತ್ತಿ ಮಾಡುವ ಕಾರ್ಯವು ನಿನ್ನಿಂದ ಪ್ರಳಯಕಾಲದಲ್ಲಿ ಇಲ್ಲವೆಂಬುದೇ ತತ್ವ.

ತಸ್ಯೈವ ತೇ ವಪುರಿದಂ ನಿಜಕಾಲಶಕ್ತ್ಯಾ
ಸಂಚೋದಿತ ಪ್ರಕೃತಿಧರ್ಮಿಣ ಆತ್ಮಗೂಢಮ್ ॥
ಅಂಭಸ್ಯನಂತಶಯನಾದ್ ವಿರಮತ್ಸಮಾಧ್ಯೇಃ
ನಭೇರಭೂತ್ಸ್ವ ಕಣಿಕಾವಟವನ್ ಮಹಾಬ್ಜಮ್ ॥ ೨೬ ॥

ಜಲದೊಳಗೆ ರಮಾತ್ಮಕ ವಟಪತ್ರದ ಮೇಲೆ ಯೋಗನಿದ್ರೆಯನ್ನು ಮುಗಿಸಿ ಪ್ರೇರಕ ನಾಮನೆಂದೆನಿಸಿದ ಯಾವ ಶ್ರೀಹರಿಯು ನಾಭಿಕಮಲದಿಂದ, ಅವನದೇ ಮತ್ತೊಂದುಕಾಲರೂಪದ ಶಕ್ತಿಯಿಂದ ಪ್ರವೃತ್ತಗೊಂಡ ಉದರದೊಳಗಿರುವ ಜಗತ್ತೆಂಬ ಸುವರ್ಣ ಪದುಮವು ಕಣಿಕೆಯಿಂದ (ನಾಭಿಕಮಲಕ್ಕೆ ಉಪಾದಾನಕಾರಣವೆಂಬ ಅಪಾರ್ಥಕ್ಕೆ ಆಸ್ಪದವಿಲ್ಲದಂತೆ ನಿಮಿತ್ತಕಾರಣದ ದೇವತೆಯ ಹೆಸರೇ ಕಣಿಕೆ ಎಂಬುದೆಂದು ಶ್ರೀಮದಾಚಾರ್ಯರೇ ಅರ್ಥಮಾಡಿರುತ್ತಾರೆ). ವಟಬೀಜ ಹೊರಹೊಮ್ಮುವಂತೆ ಉದಯಿಸಿತೋ, ಈ ಅದ್ಭುತರೂಪವೂ ಆ ಪ್ರಳಯಕಾಲದಲ್ಲಿದ್ದ ನಿನ್ನದೇ ರೂಪವಾಗಿರುವುದೆಂದು ಭಾವವು.

ತತ್ಸಂಭವಃ ಕವಿರತೋಽನದಪಶ್ಯಮಾನಃ
ತ್ವಾಮ್ ಬೀಜಮಾತ್ಮನಿ ತತಂ ಸಬಹಿರ್ವಿಚಿಂತ್ಯ ॥
ನಾವಿಂದದಗ್ದಶತಮಪ್ಸು ನಿಮಜ್ಯಮಾನೋ
ಜಾತೇಽಂಕುರೇ ಕಥಮಿಹೋಪಲಭೇತ ಬೀಜಮ್ ॥ ೨೭ ॥

ಆ ಕಮಲದಲ್ಲಿ ಅವತರಿಸಿ ನಿರ್ಗುಣ ಭಕ್ತಿಯ ಅಭಿಮಾನ ಹೊಂದಿದ ಋಜುಗಣದ ಆದಿಕವಿಯೆನಿಸಿದ ಚತುರ್ಮುಖ ಬ್ರಹ್ಮದೇವರು ಎಲ್ಲಿಯೂ ಬೇರೆ ಏನನ್ನೂ ಕಾಣದೇ, ಅಲ್ಲೇ ವ್ಯಾಪಿಸಿರುವ ಆ ರೂಪವನ್ನು ಹೊರಗೆಲ್ಲಾ ಹುಡುಕಿದರು. ಶತವರ್ಷ ಜಲದಲ್ಲಿ ಆಪ್ಲಾತವಾಗಿ ಹುಡುಕಿದರೂ ಆ ರೂಪವನ್ನು ನೋಡಲಾಗಲಿಲ್ಲ. ಕಾರಣ ಅಂಕುರವಾದ ಮೇಲೆ ಬೀಜವನ್ನು ಹುಡುಕಲು ಕಾಣುವ ಸಂಭವವು ಹೇಗೆ? ಅಂದರೆ ಕಮಲದ ಹೊರಗೆ ವೀಕ್ಷಿಸಿದ ಬಗೆ ಆ ರೂಪದ ಲೀಲೆ ಮಾತ್ರವೆಂದು ತಿಳಿಯಬೇಕು. ವಟಬೀಜ

Rarest Archive

ಅಂಕುರಿಸಿದಮೇಲೆ ಬೀಜದಲ್ಲಿದ್ದ ಆ ರೂಪ ಅಲ್ಲೇ ತೋರುತ್ತದೆಯೋ ವಿನಹ ಅನ್ಯತ್ರವಲ್ಲವೆಂಬ ಭಾವವು.

ತತ್ವಾತ್ಮಯೋನಿರತಿವಿಸ್ಮಿತ ಆಶ್ರಿತೋಽಬ್ಜಮ್
ಕಾಲೇನ ತೀವ್ರತಪಸಾ ಪರಿಶುದ್ಧಭಾವಃ ॥
ತ್ವಾಮಾತ್ಮನೀಶ ಭುವಿ ಗಂಧಮಿವಾತಿ ಸೂಕ್ಷ್ಮಮ್
ಭೂತೇಂದ್ರಿಯಾಶಯಮಯೇವಿತತಂ ದದರ್ಶ ॥ ೨೮ ॥

ಎಲೈ ಜಗದ್ಧಾರಕ! ಕಮಲದಲ್ಲಿ ಅವತರಿಸಿದ ಆ ಬ್ರಹ್ಮದೇವರು ಬಹಳ ಆಶ್ಚರ್ಯ ಹೊಂದುತ್ತಾ ದೀರ್ಘಕಾಲ ತೀರ್ವತಪಗೈದು ಮಹತ್ತತ್ತ್ವಯುಕ್ತ ಶುದ್ಧ ಹೃದಯವುಳ್ಳರಾಗಿ, ಸರ್ವತ್ರ ಭೂತೇಂದ್ರಿಯಗಳು ಹಾಗೂ ಸರ್ವಮನೋರೂಪಗಳನ್ನು ಜಗತ್ತಿನೊಳಗೆ ಸರ್ವತ್ರ ವ್ಯಾಪ್ತವಾದ ಸವಿಶೇಷ ಗುಣಸ್ವರೂಪಿಯಾದ ನಿನ್ನನ್ನು ಸಾಕ್ಷಾತ್ಕರಿಸಿ ಆ ರೂಪಗಳನ್ನು ಹೊಂದಿದರು. ಅತಿ ಸೂಕ್ಷ್ಮರೂಪ ಗಂಧ ಎಂಬ ದೇವತೆಯನ್ನು ಯೋಗಶಕ್ತಿಯುಳ್ಳ ಒಬ್ಬ ಯೋಗಿಯು ಈ ಭುವಿಯಲ್ಲಿ ಕಂಡು ತಿಳಿಯುವಂತೆ ಬ್ರಹ್ಮದೇವರು ನಿನ್ನನ್ನು ನೈಜವಾಗಿ ಕಂಡರು. ಎಂಬ ಭಾವವು.

ಏವಂ ಸಹಸ್ರ ವದನಾಂಘ್ರಿಶಿರಃ ಕರೋರು
ನಾಸಾಸ್ಯಕರ್ಣನಯನಾಭರಣಾಯುಧಾಢ್ಯಮ್ ॥
ಮಾಯಾಮಯಂ ಸದುಪಲಕ್ಷಣ ಸನ್ನಿವೇಶಂ
ದೃಷ್ಟ್ವಾ ಮಹಾಪುರುಷಮಾಪ ಮುದಂ ವಿರಿಂಚಃ ॥ ೨೯ ॥

ಕಮಲದ ಮೂಲದಲ್ಲಿ ಸೂಕ್ಷ್ಮರೂಪ ದರ್ಶನ ಮಾಡಿದ ಬ್ರಹ್ಮದೇವರು ಅದೇ ಕಾಲದಲ್ಲಿಯೇ ವಿರಾಟ್ರೂಪವಾದ ಅರ್ಥಾತ್ ಅನಂತವಾದ ಮುಖ–ಪಾದ–ಶಿರಸ್ಸು–ಕೈಗಳು–ತೊಡೆ–ಮೂಗು–ಬಾಯಿ–ಕಿವಿ–ಕಣ್ಣು–ಆಭರಣ–ಆಯುಧಗಳೇ ಮೊದಲಾದ ಜ್ಞಾನಾನಂದಾತ್ಮಕವಾದ ಬ್ರಹ್ಮಾಂಡವ್ಯಾಪಿಯಾದ ಮಾಯಾಮಯನೆಂದೆನಿಸಿದ ಮಹಾಪುರುಷರೂಪನನ್ನು ಕಂಡು ಮುದಗೊಂಡರು. ಒಂದೇಕಾಲದಲ್ಲಿ ಅತಿಸೂಕ್ಷ್ಮ ಹಾಗೂ ಸರ್ವತ್ರ ವ್ಯಾಪ್ತವಾದ ಬೃಹತ್ರೂಪವನ್ನು

Rarest Archiver

(ಮಾಯಾಮಯ ರೂಪ) ಋಜುಗಣಸ್ಥರು ಮಾತ್ರ ನೋಡುವವರೆಂಬ ಭಾವವು.

ತಸ್ಮೈಭವಾನ್ ಹಯಶಿರಸ್ತನುವಂ ಚ ಭಿಭ್ರ
ದ್ವೇದದ್ರುಹಾವತಿ ಬಲೌ ಮಧುಕೈಟಭಾಕೌ ॥
ಹತ್ವಾऽನಯಚ್ಛೃತಿಗಣಾಂಸ್ತು ರಜಸ್ತಮಶ್ಚ
ಸತ್ವಂ ತವ ಪ್ರಿಯತಮಾಂ ತನುಮಾಮನಂತಿ ॥ ೨೦ ॥

ಆ ಯಾವ ಚತುರ್ಮುಖ ಬ್ರಹ್ಮದೇವರಿಗೋಸ್ಕರ ವೇದಾದಿ ವಿದ್ಯೆ ಬೋಧಿಸಲು ಹಯಗ್ರೀವರೂಪವೆತ್ತಿ ನೀನು, ವೇದದ್ರೋಹಿಗಳಾದ ರಾಜಸ-ತಾಮಸ ಸ್ವಭಾವವುಳ್ಳ ಬಹು ಬಲಿಷ್ಠರಾದ ಮಧು-ಕೈಟಬರೆಂಬ ದೈತ್ಯರನ್ನು ಕೊಂದು ನಿತ್ಯವಾದ ವೇದಗಳನ್ನು ತಂದಿರುವಿ. ಅಥವಿವ ಸಾತ್ವಿಕಗುಣವೊಂದೇ ನಿನಗೆ ಅತ್ಯಂತ ಪ್ರಿಯವೆಂದು ತಿಳಿಯುತ್ತಾರೆ. ಅಂದರೆ ಸತ್ವ-ರಜ-ತಮ ಎಂಬ ಮೂರುಗುಣಗಳಲ್ಲಿಯೂ ನಿನ್ನ ರೂಪವಿದೆ. ಕ್ರಮವಾಗಿ ವಿಷ್ಣು-ಬ್ರಹ್ಮ-ರುದ್ರ ನಾಮಗಳೇ ಆ ರೂಪವೂ ಆಗಿದೆ. ಬ್ರಹ್ಮ-ರುದ್ರ ಅಂತರ್ಗತ ಈ ಎರಡು ರೂಪಗಳೂ ಶ್ರೀಹರಿಗೆ ಪ್ರಿಯವಾಗಿದೆ. ಸಾಕ್ಷಾತ್ ಸತ್ವಕ್ಕೆ ವಿಷ್ಣುವೇ ರೂಪನಾದ್ದರಿಂದ ವಿಷ್ಣುತತ್ತ್ವವೆಂದು ಕರೆಯಲ್ಪಡುವ ಈ ಸಾತ್ವಿಕ ರೂಪವು ಪ್ರಿಯತಮ ಎಂದು ಭಾವವು.

ಇತ್ಥಂ ನೃತಿರ್ಯಗೃಶಿದೇವಂ ದಶಾವತಾರೈಃ
ಲೋಕಾನ್ವಿಭಾವಯಸಿ ಹಂಸಿ ಜಗತ್ಪ್ರತೀಪಾನ್ ॥
ಧರ್ಮಂ ಮಹಾಪುರುಷಪಾಸಿಯುಗಾನುವೃತ್ತಮ್
ಛನ್ನಃ ಕಲೌ ಯದಭವಸ್ತ್ರಿಯುಗೋऽಥ ಸತ್ವಮ್ ॥ ೨೧ ॥

ಎಲೈ ಮಹಾಪುರುಷನೇ ಈ ರೀತಿಯಲ್ಲಿ ಮತ್ಸ್ಯಾದಿ ತಿರ್ಯಕ್-ನರ-ಋಷಿ-ದೇವತಾದಿ ಅವತಾರಗಳನ್ನೆತ್ತಿ ಇಡೀ ಜಗತ್ತನ್ನೇ ಬೆಳಗಿಸಿ ಪಾವನಮಾಡುವೆ. ಜಗದ ಕಡುವೈರಿಗಳನ್ನು ವಧಿಸುವೆ. ಯುಗಾನುಗುಣವಾದ ಧರ್ಮವನ್ನು ಸ್ಥಾಪಿಸುವೆ. ಕಲಿಯುಗದಲ್ಲಿ ಅವ್ಯಕ್ತನಾಗಿರುವೆ. ಆದ್ದರಿಂದ ನೀನು ತ್ರಿಯುಗ ನೆಂದು ಕರೆಸಿಕೊಳ್ಳುವೆ. ನಮ್ಮ ದಿನನಿತ್ಯ ಸಂಕಲ್ಪದಲ್ಲಿ ಬೌದ್ಧಾವತಾರೇ ಎಂದು ಉಕ್ತವಾಗಿರುವುದಕ್ಕೇನೂ ಭಾಧಕವಿಲ್ಲದಂತೆ, ತತ್ವಜ್ಞಾನ-ಧರ್ಮ ಸಂಸ್ಥಾಪನಾದಿ

Rarest Archive

ಕಾರ್ಯಗಳಲ್ಲದ ರೂಪವೆಂದ ಶ್ರೀಮದಾಚಾರ್ಯರು ಅರ್ಥೈಸಿದ್ದಾರೆಂದು ಭಾವವು.

ನೈತನ್ಮನಸ್ತವ ಕಥಾಸುವಿಕುಂಠನಾಥ
ಸಂಪ್ರೀಯತೇ ದುರಿತದುಸ್ತಮಸಾದು ತೀವ್ರಮ್
ಕಾಮಾತುರಂ ಹರ್ಷಶೋಕಭಯೇಷಣಾರ್ಥಮ್
ತಸ್ಮಿನ್ ಕಥಂ ತವಗತಿಂ ವಿಮೃಷಾಮಿ ಧೀನಃ ॥ ೩೨ ॥

ಹೇ ಮುಕ್ತನಿಯಾಮಕ! ನಿನ್ನ ಅನುಗ್ರಹ ಪ್ರಸಾದವಿಲ್ಲದ ಮನಸ್ಸು ನಿನ್ನ ಕಥೆಗಳಲ್ಲಿ ಆಸಕ್ತವಾಗಿ ಆನಂದಿಸುತ್ತಿಲ್ಲ. ದುಷ್ಟವಿಚಾರದಿಂದ ಬೂಯುಷ್ಟವಾಗಿದೆ. ಅಷ್ಟೇ ಅಲ್ಲದೇ ಸೂಕ್ಷ್ಮವಾಗಿಯೂ ಹದಗೆಟ್ಟಿದೆ. ದುಷ್ಟಕಾಮದ ತೀವ್ರತೆಯಿಂದ ಸುಖದುಃಖಾತ್ಮಕ ಭಯ ಹಾಗೂ ನಾನಾತೆರನಾದ ಆಸೆಗಳಿಗೆ ಬಲಿಯಾಗಿ ಬಳಲಿದೆ. ಇಂತಹ ಹದಗೆಟ್ಟ ಮನಸ್ಸಿನಲ್ಲಿ ನಿನ್ನ ಸನ್ಮಾರ್ಗದ ಚಿಂತನ-ಮಂಥನಕ್ಕೆ ಅವಕಾಶವೆಲ್ಲಿ? ಮನಸ್ಸಿದ್ದ ಇಂದ್ರಿಯಗಳಿಗೆ ಬೆಲೆ ಅಂದರೆ ಪ್ರಾಮಾಣ್ಯತೆ. ಅಂತಹ ಮನಸ್ಸಿಗೆ ವಿಫಲತೆಯುಂಟಾದರೆ ಶ್ರೀ ಹರಿಯೇ ಗತಿ ಎಂಬ ಅನನ್ಯ ಭಾವವು.

ಜಿಹ್ವೈಕತೋಽಚ್ಯುತ ವಿಕರ್ಷತಿ ಮಾಽವಿತೃಪ್ತಾ
ಶಿಶ್ನೋಽನ್ಯತಸ್ತ್ವದುದರಂ ಶ್ರವಣಂ ಕುತಶ್ಚೇತ್ ॥
ಘ್ರಾಣೋಽನ್ಯ ತಶ್ಚಫಲದೃಕ್ ಕ್ವಚಕರ್ಮಶಕ್ತಿರ್ಬಹ್ವ್ಯಃ
ಸಪತ್ನ್ಯಇವ ಗೇಹಪತಿಂ ಲುನಂತಿ ॥ ೩೩ ॥

ಹೇ ಅಚ್ಯುತ! ನಾಲಿಗೆಯು ಕಪ್ಪೆಯಂತೆ ಲೋಕವಾರ್ತೆಯಿಂದ ಎಷ್ಟು ವಟಗುಟ್ಟಿದರೂ ತೃಪ್ತಿಯನ್ನು ಹೊಂದಿಲ್ಲ. ಕಣ್ಣಿನ ಸೆಳೆತ ಒಂದೆಡೆಯಾದರೆ ಗುಹ್ಯೇಂದ್ರಿಯ ಮತ್ತೊಂದೆಡೆಗೆ ಸೆಳೆಯುತ್ತದೆ. ಹೀಗೆಯೇ ಚರ್ಮ-ಉದರ-ಶ್ರವಣ-ಮೂಗು ಇವುಗಳು ಒಂದೊಂದು ಕಡೆ. ಒಂದೊಂದು ಇಂದ್ರಿಯಗಳ ಚಕ್ಕಂದದಿಂದ ಉತ್ಪನ್ನವಾದ ಚಪಲಚಿತ್ತದ ಪಾಡೇನು? ಇನ್ನು ಕರ್ಮೇಂದ್ರಿಯಗಳು ಹೇಳತೀರದು. ದೇಹಕ್ಕೆ ಅನೇಕ ಶತ್ರುಗಳ ಪೀಡೆಯು ಏಕಕಾಲಕ್ಕೆರಗಿದಂತಿದೆ. ಹೀಗೆ ಒಳ-ಹೊರವೆಂಬ ಶತ್ರುಗಳ ಅರ್ಥಾತ್ ಅರಿಷಡ್ವರ್ಗಗಳ ಗಮನಕ್ಕೆ ಶ್ರೀಹರಿಯ ಅನುಗ್ರಹವೆಂಬ ಅಂಕುಶವೇ ಆಯುಧವೆಂಬ ಭಾವವು.

ಏವಂ ಸ್ವಕರ್ಮ ಪತಿತಂ ಭವವೈತರಣ್ಯಾ

Rarest Archiver

ಮನ್ಯೋನ್ಯ ಜನ್ಮಮರಣಾಶನಭೀತ ಭೀತಮ್ ॥
ಪಶ್ಯನ್ ಜನಂ ಸ್ವಪರ ವಿಗ್ರಹ ವೈರ ಮೈತ್ರಂ
ಹಂತೇತಿ ಪಾರಮತಿಪೀಪೃಹಿಮೂಢಸತ್ವಂ ॥ ೩೪ ॥

ಹೇ ಜಗದ್ಗುರೋರ್ಗುರುವೇ! ರಮಾಬ್ರಹ್ಮಾದಿಗಳ ಹಂಗಿಲ್ಲದ ಶ್ರೀ ಹರಿಯೇ ಜಗದ ಸೃಷ್ಟಿ-ಸ್ಥಿತಿ-ಲಯ ಮಾಡುವ ನಿನಗೆ ಈ ಜೀವ ಸಮೂಹದ ಉದ್ಧಾರಗೈಯಲು ಶ್ರಮವೇನಾದರೂ ಉಂಟೇ? ಹೇ ಆತ್ಮಬಂಧುವೇ! ನಮ್ಮಂತಹ ಮೂಢರಮೇಲೆ ಮಾಡುವ ಕೃಪಾಶೀರ್ವಾದದಿಂದ ಸ್ವರಮಣನಾದ ನಿನಗೇನು ಲಾಭ? ಆದರೂ ಭಕ್ತೈಕವಶ್ಯನಾದ ನೀನು ಭಕ್ತರಿಗೆ ಸಾಧನಾನುಕೂಲ ಮಾಡಿಕೊಡುವ ಸ್ವಭಾವ ನಿನ್ನದಲ್ಲವೇ? ತಮಗೆ ಪ್ರಯೋಜನವಿಲ್ಲದಿದ್ದರೂ ಪರದುಃಖದುಃಖಿತ್ವಗುಣ ವಿಶಿಷ್ಟರು ಪರಪ್ರಯೋಜನಕ್ಕಾಗಿಯೇ ನಿಷ್ಟರೆಂಬ ಭಾವವು.

ಕೋನ್ವತ್ರತೇಽಖಿಲ ಗುರೋ ಭಗವನ್ಪ್ರಯಾಸ
ಉತ್ತಾರಣೇಽಸ್ಯ ಭವಸಂಭವ ಲೋಪ ಹೇತೋಃ ॥
ಮೂಢೇಷು ವೈ ಮಹದನುಗ್ರಹ ಆರ್ತಬಂಧೋ
ಕಿಂ ತೇನತೇ ಪ್ರಿಯಜನಾನನು ಸೇವ್ಯಮಾನಃ ॥ ೩೫ ॥

ನಿನ್ನ ಗುಣ ಮಹಾತ್ಮೆಗಳನ್ನು ತಿಳಿಸುವ ವೇದಾದಿ ಶಾಸ್ತ್ರಗಳ ಮಹಾಸಾಗರದಲ್ಲಿ ಪಾಠ-ಪ್ರವಚನವೆಂಬ ಅಲೆಯ ತರಂಗದಲ್ಲಿ ನಿರಂತರ ಚಿತ್ತವಿಟ್ಟ ನಾನು ಈ ಕೆಟ್ಟ ಸಂಸಾರದಿಂದ ದುಸ್ತರವಾದ ವೈತರಣಿಗೆ ಉದ್ವೇಗಿಸುವವನಲ್ಲ. ಪರಂತು ನಿನಗೆ ವಿಮುಖಿಗೊಂಡ ಮನಸ್ಸುಳ್ಳ ಇಂದ್ರಿಯಗಳನ್ನು ತೃಪ್ತಿಪಡಿಸಲು ಹಾಗೂ ಕ್ಷಣದ ಸುಖಕ್ಕಾಗಿ ಸಂಸಾರ ಭಾರಹೊರುವ ವಿವೇಕರಹಿತ ಜನರಿಗೋಸ್ಕರ ಮರುಗುತ್ತೇನೆ. ತಮ್ಮ ಆತ್ಮೋದ್ಧಾರದ ಫಲಸಿದ್ಧಿಗೊಂಡ ಪ್ರಹ್ಲಾದರಾಜರು ಪರರ ಆತ್ಮೋದ್ಧಾರಕ್ಕೆ ಆ ರೂಪದಲ್ಲಿ ಮಾತ್ರ ಫಣತೊಟ್ಟವರಲ್ಲ. ಅವರೇ ಪುನಃ ಶ್ರೀ ವ್ಯಾಸರಾಜರಾಗಿ, ಶ್ರೀ ರಾಘವೇಂದ್ರತೀರ್ಥರಾಗಿ ಅವತರಿಸಿ, ಪರರ ಆತ್ಮೋದ್ಧಾರಕ್ಕೆ ಕಾರಣವಾದ ಪಾಠ-ಪ್ರವಚನ-ಮಿಗಿಲಾಗಿ ಶಾಶ್ವತ ತತ್ವಜ್ಞಾನದ ಪ್ರೌಢಕೃತಿಗಳ ರಚನೆಯನ್ನೂ ಮಾಡಿರುವವರೆಂಬ ಭಾವವು.

ನೈವೋದ್ವಿಜೇ ಭವದುರತ್ಯಯ ವೈತರಣ್ಯಾಃ

Rarest Archiver

ತ್ವತ್ತೀರ್ಥಗಾಯನ ಮಹಾಮೃತ ಮತ್ತಚಿತ್ತಃ ||
ಶೋಚೇನುತಂ ವಿಮುಖ ಚೇತಸ ಇಂದ್ರಿಯಾರ್ಥ
ಮಾಯಾಸುಖಾಯಭರಮುದ್ವಹತೋ ವಿಮೂಢಾನ್ || ೩೬ ||

ಬಹುಷಃ ದೇವತಾದಿ ಋಷಿ-ಮುನಿಗಳ ತಮ್ಮ ಹಾಗೂ ತಮ್ಮವರ ವಿಮುಕ್ತಿಗಾಗಿ ಏಕಾಂತಸ್ಥಳದಲ್ಲಿ ಧ್ಯಾನ-ಮೌನಾದಿ ವ್ರತಗಳನ್ನು ಕೈಗೊಳ್ಳುತ್ತಾರೆ. ಪರದುಃಖವನ್ನು ನೀಗಿಸಿ ಅವರ ಸುಖಪ್ರಾಪ್ತಿಗಾಗಿ ನಿಷ್ಠೆವಹಿಸುತ್ತಾರೆ. ಅದು ಅವರ ಸ್ವಾಭಾವಿಕ ಗುಣ. ಹಾಗೆಯೇ ನಾನು ನನ್ನನ್ನೇ ನಂಬಿರುವ ಧೀನರಾದ ಈ ದೈತ್ಯಬಾಲಕ ಸಮೂಹವನ್ನು ಬಿಟ್ಟು ಒಬ್ಬನೇ ವಿಮುಕ್ತಿಗೊಳ್ಳುವ ಆಸೆಯಿಲ್ಲ. ಅದಕ್ಕೆಂದೇ ಸರ್ವತ್ರ ಸಂಚರಿಸುವ ನನಗೆ ನಿನ್ನ ಶರಣಾಗತಿಯಿಲ್ಲದೆ ಗತ್ಯಂತರವಿಲ್ಲ. ಪರರ ಮೋಕ್ಷಾದಿ ಪುರುಷಾರ್ಥ ಸಾಧನೆಗೆ ಸಹಾಯಕರಾಗುವುದು ಉತ್ತಮಾಧಿಕಾರಿಗಳ ಲಕ್ಷಣ. ಅತಏವ ಶ್ರೀಮದಾಚಾರ್ಯರು ವಾಯುನಾಚ ಸಮಾವಿಷ್ಟಃ ಪ್ರಹ್ಲಾದೋ ನಿತ್ಯ ಭಕ್ತಿಮಾನ್ ಎಂದು ತಿಳಿಸಿರುವುದು ಎಷ್ಟು ಯಥಾರ್ಥವೆಂಬ ಭಾವವು.

ಪ್ರಾಯೇಣ ದೇವ ಮುನಯಃ ಸ್ವ ವಿಮುಕ್ತಿಕಾಮಾಃ
ಮೌನಂ ಚರಂತಿ ವಿಜನೇನ ಪರಾರ್ಥನಿಷ್ಠಾಃ ||
ನೈತಾನ್ವಿಹಾಯ ಕೃಪಣಾನ್ ವಿಮುಮುಕ್ಷ ಏಕೋ
ನಾನ್ಯಂ ತ್ವದಸ್ಯ ಶರಣಂ ಭ್ರಮತೋನು ಪಶ್ಯೇ || ೩೭ ||

ಯನ್ಮೈಥುನಾದಿ ಗೃಹಮೇಧಿಸುಖಂ ಹಿ ತುಚ್ಛಂ
ಕಂಡೂಯನೇನ ಕರಯೋರಿವ ದುಃಖದುಃಖಮ್ ||
ತೃಪ್ಯಂತಿ ನೇಹಕೃಪಣಾ ಬಹುದುಃಖಭಾಜಃ
ಕಂಡೂತಿವನ್ಮಸಿಜಂ ವಿಶಹೇತ ಧೀರಃ || ೩೮ ||

ಯಾವ ಗೃಹಸ್ಥರ ಮೈಥುನಾದಿ ಸುಖಗಳು ಅತ್ಯಂತ ತುಚ್ಛವಾದವುಗಳು. ಕಜ್ಜಿ ಕೈಗಳನ್ನು ಪರಸ್ಪರ ಉಜ್ಜಿದಂತೆ ಪುನಃ ಪುನಃ ಸುಖದಂತೆ ಕಾಣುವ ದುಃಖವೇ. ದೇಹಸುಖವೇ ಪ್ರಧಾನವೆಂದು ತಿಳಿದ ಮಂದಿ ಈ ಕ್ಷಣಿಕ ಸುಖದಲ್ಲಿ ತೃಪ್ತಿಗೊಂಡರೂ

Rarest Archive

ಮುಂದೆ ಭಯಾನಕ ದುಃಖಭಾಜನರಾಗುತ್ತಾರೆ. ಆದರೆ ಜ್ಞಾನವಂತ ವಿವೇಕಿಗಳು ಗಾಯದ ತುರಿಕೆಯನ್ನು ಅರ್ಥಾತ್ ಈ ದೇಹ ಕಾಮವನ್ನು ಸಹಿಸಿಕೊಂಡು ಧೀರರೆನಿಸಿಕೊಳ್ಳುವರು.

ಮೌನವ್ರತ ಶ್ರುತತಪೋಽಧ್ಯಯನಸ್ವಧರ್ಮ
ವ್ಯಾಖ್ಯಾರಃಓಜಪಸಮಾದಯ ಆಪವರ್ಗ್ಯಾಃ ||
ಪ್ರಾಯಃ ಪರಂ ಪುರುಷ ತೇ ತ್ವಜಿತೇಂದ್ರಿಯಾಣಾಂ
ವಾರ್ತಾಭವಂತ್ಯಪಿ ನ ವಾತ್ರತು ಧಾಂಬಿಕಾನಾಮ್ || ೩೯ ||

ಹೇ ಹೃಷೀಕೇಶನೇ! ಧ್ಯಾನ–ಮೌನ–ವ್ರತ–ಶ್ರವಣ–ತಪಸ್ಸು–ಅಧ್ಯಯನ–ಸ್ವವಿಹಿತ ಧರ್ಮ–ಕರ್ಮಾನುಷ್ಠಾನ, ಕಥಾವಾಚನ–ಏಕಾಂತವಾಸಾದಿ ಸಮಾಧಿಯೋಗಾದಿಗಳು ಎಲ್ಲವೂ ಭಕ್ತಿಯುಳ್ಳವರಿಗೆ ಮುಕ್ತಿಮಾರ್ಗಗಳು. ಚಪಲೇಂದ್ರಿಯರಿಗೆ ಇವೆಲ್ಲ ಕೇವಲ ಬದುಕಿನಲ್ಲಿ ಹಣಗಳಿಸುವ ದಾರಿಗಳು. ಡಾಂಬಿಕರಿಗಂತೂ ನಿಷ್ಪ್ರಯೋಜಕವೇ ಸರಿ. ಅಂದರೆ ಅನ್ಯಮಾರ್ಗವಿಲ್ಲದೆ ಕೇವಲ ಹೊಟ್ಟೆಪಾಡಿಗೆ ಈ ಮೇಲಿನ ಕರ್ಮಾಚರಣೆಯನ್ನು ಸ್ವೀಕರಿಸುವರೆಂಬ ಭಾವವು.

ರೂಪೇ ಇಮೇ ಸದಸತೀ ತವ ವೇದ ದೃಷ್ಟೇ
ಬೀಜಾಂಕುರಾದಿವ ನಚಾನ್ಯದರೂಪಕಸ್ಯ ||
ಯುಕ್ತಾಃ ಸಮಕ್ಷಮುಭಯತ್ರ ವಿಚಿನ್ವತೇತ್ವಾಂ
ಯೋಗೇನ ವಹ್ನಿಮಿವ ದುರಾಶುನಾನ್ಯತಃ ಸ್ಯಾತ್ || ೪೦ ||

ಕಾರ್ಯ–ಕಾರಣ ಸಂಬಂಧವಿದ್ದೇ ಈ ಪ್ರಪಂಚದ ಸೃಷ್ಟಿ. ಬೀಜಾಂಕುರಗಳಂತೆ ಸಂಬಂಧವುಳ್ಳ ಈ ಪ್ರಪಂಚ ನಿನಗೆ ಪ್ರತಿಮೆಯ ರೂಪ. ಆದರೂ ಪ್ರಾಕೃತರೂಪವಿಲ್ಲದ ನೀನು ಈ ಪ್ರಪಂಚದಿಂದ ಭಿನ್ನನೇ. ಐಕ್ಯಭಾವವೆಂಬ ಭ್ರಮೆ ಬೇಡ. ಇದು ವೇದೋಕ್ತ ಸಿದ್ಧಾಂತ. ಆದ್ದರಿಂದಲೇ ಭಕ್ತರಿಗೆ ಇಹ–ಪರದ ನಿನ್ನ ದರ್ಶನ. ಅಗ್ನಿಯು ಕಟ್ಟಿಗೆಯೊಳಗೆ ಇರುವಂತೆ ಸರ್ವತ್ರ ಇರುವ ಶ್ರೀ ಹರಿಯು ಭಕ್ತಿಯಿಂದ ಕಾಣಲು ಮಾತ್ರವು ಬೇರೆ ಯಾವ ಉಪಾಯವೂ ಇಲ್ಲ. ದಾರು–ಅಗ್ನಿ ಅನ್ಯೋನ್ಯವಿದ್ದ ಮಾತ್ರಕ್ಕೆ ಹೇಗೆ ಐಕ್ಯಕ್ಕೆ ಸ್ಥಾನವಿಲ್ಲವೋ ಹಾಗೆಯೇ ಜಗದ್ವ್ಯಾಪಿ ಭಗವಂತನ ವಿಷಯದಲ್ಲಿಯೂ ಐಕ್ಯಕ್ಕೆ

Rarest Archiver

ಸ್ಥಾನವಿಲ್ಲ ಎಂಬ ಭಾವವು.

ತ್ವಂವಾಯುರಗ್ನಿರವನಿರ್ವಿಯದಂಭುಮಾತ್ರಾಃ
ಪ್ರಾಣೇಂದ್ರಿಯಾಣಿ ಹೃದಯಂ ಚಿದನುಗ್ರಹಶ್ಚ ॥
ಸರ್ವಂ ತ್ವಮೇವ ಸುಗುಣೋ ವಿಗುಣಶ್ಚ ಭೂಮನ್
ನಾನ್ಯತ್ವದಸ್ತ್ಯಪಿ ಮನೋವಚಸಾ ನಿರುಕ್ತಮ್ ॥ ೪೧ ॥

ವಾಯು, ಅಗ್ನಿ, ಪೃಥಿವಿ, ಆಕಾಶ, ಜಲನೆಂದೆನಿಸುವ ನೀನೇ. ಹಾಗೆಯೇ ಪಂಚತನ್ಮಾತ್ರ-ಪಂಚೇದ್ರಿಯ-ಮನಸ್ಸೂ ನೀನೇ. ಸಗುಣ-ನಿರ್ಗುಣವೂ ನೀನೇ. ಕೊನೆಗೆ ಈ ಚರಾಚರಾತ್ಮಕ ಪ್ರಪಂಚವೆಲ್ಲವೂ ನೀನೆ. ನಿನ್ನ ಹೊರತಾಗಿ ಮನಸ್ಸು-ಮಾತುಗಳಿಗೆ ಲಭ್ಯವಾಗುವ ಯಾವ ವಸ್ತುವೂ ಉಳಿದಿಲ್ಲ. ಅಂದರೆ ಭಗವಂತನ ಸಂಬಂಧವಿಲ್ಲದೆ ಬೇರೆವಸ್ತುವನ್ನು ಮಾತ್ರ ಹೇಳುವ ಯಾವ ಶಬ್ದವೂ ಉಳಿದಿಲ್ಲವೆಂಬ ಭಾವವು.

ನೈತೇಗುಣಾನಗುಣಿನೋ ಮಹದಾದಯೋ ಯೇ
ಸರ್ವೇ ಮನಃ ಪ್ರಭೃತಯಃ ಸಃ ದೇವ ಮರ್ತ್ಯಾಃ ॥
ಆದ್ಯಂತವಂತ ಉರುಗಾಯವಿದಂತಿ ಹಿತ್ವಾ
ಏವಂ ವಿಮೃಶ್ಯ ಸುಧಿಯೋ ವಿರಮಂತಿ ಶಬ್ದಾತ್ ॥ ೪೨ ॥

ಹೇ ಓತ-ಪ್ರೋತ್ರನೇ! ಮಹತ್ತತ್ತ್ವ-ಸತ್ವಾದಿ ಗುಣಗಳಿಗೆ ಅಭಿಮಾನಿಗಳಾದ ಬ್ರಹ್ಮಾದಿ ದೇವತೆಗಳಾಗಲೀ ಈ ಗುಣಗಳ ನಿಮಿತ್ತ ದೇವ-ಮಾನವರೆಂಬ ಭೇಧಸಹಿತವಾದ ಮನಸ್ಸೇ ಮೊದಲಾದ ಅಭಿಮಾನಿಚೇತನರೆಲ್ಲಾ ನಿನ್ನನ್ನು ಪೂರ್ಣ ತಿಳಿಯಲಾರರು. ಯಥಾಮತಿಯು ಗೆರೆ ದಾಟಲಾರರು. ಹೀಗೆ ದೇವಾದಿ ದೇವತೆಗಳಿಗೆ ಸ್ತುತಿಸಲು ಆಗದೆಂದು ತಿಳಿದವರು ಶಬ್ದ ಸಾಲದೆಂದು ಮೌನವಹಿಸಿ ಕೊನೆಗೆ ಆದ್ಯಂತರಹಿತನೆಂದೇ ಸ್ತುತಿಸುತ್ತಾರೆಂಬ ಭಾವವು.

ತತ್ವೇ ಮನೋ ದರ್ಶನೇ ಧೃಗಪಿಸುತೌಚ
ವಾಕ್ಕರ್ಮಣಿಹ್ಯಪಿ ಕರೌ ಶರಣಂ ಕಥಾಯಾಮ್ ॥
ಸಂಸೇವಯಾ ತ್ವಯಿ ವಿನೇತಿ ಷಡಂಗಯಾ ಕಿಮ್
ಭಕ್ತಿಂ ಜನಃ ಪರಮಹಂಸ ಗತೌ ಲಭೇತ ॥ ೪೩ ॥

Rarest Archiver

ಮನಸ್ಸು ತತ್ವದಲ್ಲಿ, ನೇತ್ರ ನಿನ್ನ ನೋಟದಲ್ಲಿ, ಮಾತು ನಿನ್ನ ಸ್ತೋತ್ರದಲ್ಲಿ, ಕರಗಳು ನಿನ್ನ ಸೇವೆಯಲ್ಲಿ, ಪಾದಗಳು ನಿನ್ನ ಕ್ಷೇತ್ರ ಸಂಚಾರದಲ್ಲಿ, ಕಿವಿಗಳು ನಿನ್ನ ಕಥಾ ಶ್ರವಣದಲ್ಲಿ ಈ ವಿಧ ಷಡಂಗ ಸೇವೆ ನಿನ್ನಲ್ಲೇ ಹೊಂದಿಸಲು ಸಾಧ್ಯವಾಗದಿದ್ದರೆ, ಪರಮಹಂಸರಿಗೆ ಲಭಿಸುವ ಶ್ರೇಷ್ಠ ಹರಿಭಕ್ತಿಯು ಈ ನಿನ್ನ ದಾಸನಿಗೆ ಸಿಗುವುದು ಸಾಧ್ಯವೇ? ಜ್ಞಾನಕ್ಕೆ ಕರ್ಮದ ಆವರಣವಿದೆ. ಈ ಕರ್ಮದ ಕಾರ್ಯವೇ ಸದಾಚಾರ ಷಡಂಗ ಸೇವೆಯ ರೂಪ ಇದರ ಫಲವೇ ಶ್ರೇಷ್ಠವೆನಿಸಿದ ಭಕ್ತಿಯು. ಇದೇ ಜೀವರ ಸಾಧನೆಯ ಪೂರ್ಣ ವಿರಾಮ. ಅಂತಹ ಭಕ್ತಿಗೆ ಕಾರಣವಾದ ಷಡಂಗಸೇವೆಯನ್ನು ಕರುಣಿಸೆಂಬ ಭಾವವು.

॥ ಇತಿ ಶ್ರೀ ಮದ್ಭಾಗವತಾಂತರ್ಗತ ಪ್ರಹ್ಲಾದಕೃತ ಶ್ರೀಲಕ್ಷ್ಮೀನರಸಿಂಹ ಸ್ತೋತ್ರಂ ಸಂಪೂರ್ಣಮ್ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

Rarest Archiver